ಅಭಿಜ್ಞಾನ

ಭಾರತತೀರ್ಥ 1

# ಗಣಪತಿಯ ಕಲ್ಪನೆ

ಸಾ. ಕೃ. ರಾಮಚಂದ್ರರಾವ್

*ಭಾರತತೀರ್ಥ - 1*

# ಗಣಪತಿಯ ಕಲ್ಪನೆ

ಸಾ. ಕೃ. ರಾಮಚಂದ್ರರಾವ್

**2008**

ಇಪ್ಪತ್ತನಾಲ್ಕನೆಯ ಪ್ರಕಟನೆ

ಅಭಿಜ್ಞಾನ

ಬೆಂಗಳೂರು - 560 019

✆ 080 - 2242 14 14, 94484 94949

abhijnanam@yahoo.com

abhijnanabooks@yahoo.com

GAṆAPATIYA KALPANE (An Essay on the Concept of Gaṇapati), by Prof. S. K. Ramachandra Rao, Published by Abhijñāna, Bangalore - 560 019, INDIA.
Email: abhijnanam@yahoo.com, abhijnanabooks@yahoo.com
First Edition: 1966 Pages: 96 Price: Rs. 60
First reprint (from Abhijñāna): 2008

© *All rights reserved*

ಪುಟಗಳು: 96
ಬೆಲೆ: ರೂ. 60
ಪ್ರಥಮ ಆವೃತ್ತಿ: 1966
ಪ್ರಥಮ ಪುನರ್ಮುದ್ರಣ: 2008 (ಅಭಿಜ್ಞಾನದಿಂದ)
ಮುಖಪುಟವಿನ್ಯಾಸ: ಪ್ರಥಮ್ ವರ್ಲ್ಡ್

**ISBN: 978-81-88278-16-9**

*ಸಂಪರ್ಕ ವಿಳಾಸ:*
ಎಸ್. ಸೂರ್ಯಪ್ರಕಾಶ ಪಂಡಿತ್
ನಂ. 2, ದತ್ತಾತ್ರೇಯ ದೇವಸ್ಥಾನದ ರಸ್ತೆ
ಪೈಪ್‌ಲೈನ್, ಮಲ್ಲೇಶ್ವರಂ
ಬೆಂಗಳೂರು - 560 003
✆ 94484 94949

*ಅಕ್ಷರಜೋಡಣೆ:* ಗಾಯತ್ರಿ ಪ್ರಿಂಟ್ಸ್, ಬೆಂಗಳೂರು - 560 050
✆ 26699367

LAKSHMI MUDRANALAYA
ISO 9001-2000
ಚಾಮರಾಜಪೇಟೆ, ಬೆಂಗಳೂರು-೧೮
ದೂರವಾಣಿ : ೨೬೬೧ ೫೧೨೫, ೨೬೬೧ ೮೭೪೨

# ಅಭಿಜ್ಞಾನದ ಮಾತು

ಗಜಮುಖನೆ ಮೆರೆವೇಕದಂತನೆ
ನಿಜಗುಣಾನ್ವಿತ ಪರಶುಧಾರನೆ
ರಜತಗಿರಿಗೊಡೆಯನ ಕುಮಾರನೆ ವಿದ್ಯೆವಾರಿಧಿಯೆ ।
ಅಜನು ಹರಿರುದ್ರಾದಿಗಳು ನೆರೆ
ಭಜಿಸುತಿಹರನವರತ ನಿನ್ನನು
ತ್ರಿಜಗವಂದಿತ ಗಣಪ ಮಾಳ್ಪುದು ಮತಿಗೆ ಮಂಗಳವ ॥

*—ಕುಮಾರವ್ಯಾಸಭಾರತ*
*ಆದಿಪರ್ವ, ಪೀಠಿಕಾಸಂಧಿ*

ಗಣಪತಿಯ ಕಲ್ಪನೆಯು ಭಾರತೀಯಸಂಸ್ಕೃತಿಯಲ್ಲಿ ವಿಶಿಷ್ಟವಾಗಿ ಬೆಳೆದುಬಂದಿದ್ದೂ, ಇಂದಿಗೂ ಇದು ಜನಮಾನಸದ ಮೇಲೆ ತನ್ನ ಪ್ರಭಾವಮುದ್ರೆಯನ್ನು ಮೂಡಿಸುತ್ತಲೇ ಇದೆ. ನಿರ್ವಿಘ್ನವಾಗಿ ನಮ್ಮ ಚಟುವಟಿಕೆಗಳು ನಡೆಸುವಂತಾಗಲು ಯಾವುದೇ ಕಾರ್ಯಾರಂಭಕ್ಕೂ ಮೊದಲು ಗಣಪತಿಯನ್ನು ಪೂಜಿಸುವ ರೂಢಿ ಇಂದು ನಮ್ಮ ಸಮಾಜದಲ್ಲಿ ನೆಲೆ ನಿಂತಿದೆ. ಕೇವಲ ಧಾರ್ಮಿಕಕ್ಷೇತ್ರದಲ್ಲಿ ಮಾತ್ರವಲ್ಲದೆ ಬದುಕಿನ ಹಲವು ಧಾರೆಗಳಲ್ಲಿ ಗಣಪತಿಯು ತೋರಿಕೊಂಡಿದ್ದಾನೆ. ಕಲೆಯಲ್ಲಿ—ಅದರಲ್ಲೂ ಮುಖ್ಯವಾಗಿ ಚಿತ್ರ-ಶಿಲ್ಪಕಲೆಗಳಿಗೆ ಗಣಪತಿಯು ಒದಗಿಸಿರುವ ಸ್ಫೂರ್ತಿ ಅತ್ಯಂತ ದಟ್ಟವಾಗಿದೆ. ಭಾರತದ ಸ್ವಾತಂತ್ರ್ಯಸಂಗ್ರಾಮಕ್ಕೂ ಗಣೇಶನ ಕೊಡುಗೆ ಅನನ್ಯವಾಗಿದೆ. ಕಾವ್ಯ, ಸಂಗೀತಕ್ಷೇತ್ರಗಳಿಗೂ ಗಣಪತಿಯ ಅನುಗ್ರಹ ಯಥೇಷ್ಟವಾಗಿಯೇ ಒದಗಿದೆಯೆನ್ನಬಹುದು. ಹೀಗೆ, ಭಾರತೀಯರ ದಿನನಿತ್ಯದ ಅನಿವಾರ್ಯವಾಗಿರುವ, ಸ್ಫೂರ್ತಿಯಾಗಿರುವ, ಆರಾಧನೆ ಯಾಗಿರುವ, ಅಭಯವಾಗಿರುವ, ವರವಾಗಿರುವ, ಶಕ್ತಿಯಾಗಿರುವ, ಶಾಂತಿಯಾಗಿರುವ, ಸಂತಸವಾಗಿರುವ, ಮಾರ್ಗವಾಗಿರುವ, ಗುರಿಯಾಗಿರುವ ಗಣಪತಿಯನ್ನೂ, ಅವನ ಕಲ್ಪನೆಯ ಹಿಂದಿರುವ ಸ್ವಾರಸ್ಯವನ್ನೂ

ಅರಿಯುವುದೇ ಒಂದು ಆಹ್ಲಾದಕರ, ಆಸ್ವಾದಕರ ಸಾಂಸ್ಕೃತಿಕಾನುಭವ. ಇಂಥ ಒಂದು ಪುಟ್ಟ ಪ್ರಯತ್ನವೇ ಪ್ರಸ್ತುತಕೃತಿ **ಗಣಪತಿಯ ಕಲ್ಪನೆ**; ಇದು 'ಭಾರತತೀರ್ಥ' ಗ್ರಂಥಮಾಲಿಕೆಯಲ್ಲಿ ಪ್ರಥಮಕುಸುಮವಾಗಿ ಅರಳಿದೆ.

ಆಚಾರ್ಯ ಪ್ರೊ. ಸಾ. ಕೃ. ರಾಮಚಂದ್ರರಾಯರು ಭಾರತೀಯತೆಯ ಮೂರ್ತರೂಪದಂತಿದ್ದವರು; ಇವರು ಭೌತಿಕವಾಗಿ ಇಂದು ನಮ್ಮೊಂದಿಗಿಲ್ಲದಿದ್ದರೂ ಇವರ ಚೇತನ ಸದಾ 'ಅಭಿಜ್ಞಾನ'ಕ್ಕೆ ಶಕ್ತಿಯನ್ನು ಒದಗಿಸುತ್ತಲೇ ಬಂದಿದೆ; ಇಷ್ಟಕ್ಕೂ ಋಷಿತತ್ತ್ವಕ್ಕೆ ಅಂತ್ಯವೆಂಬುದು ಇರದೆನ್ನಿ. ರಾಯರ ಕೃತಿಯೇ ಭಾರತತೀರ್ಥಮಾಲಿಕೆಯ ಮೊದಲ ಪುಸ್ತಕವಾಗಿರುವುದು ನಮಗೊಂದು ಅನುಗ್ರಹವೆಂದೇ ಭಾವಿಸಿದ್ದೇವೆ. ರಾಮಚಂದ್ರರಾಯರು ಭಾರತೀಯವಿದ್ಯೆಯ ಹತ್ತುಹಲವು ಶಾಖೆಗಳಲ್ಲಿ ಪರಿಣತರು; ಇನ್ನೂರಕ್ಕೂ ಹೆಚ್ಚು ಮೌಲಿಕಗ್ರಂಥಗಳನ್ನು ಕನ್ನಡ-ಇಂಗ್ಲಿಷ್‌ಭಾಷೆಗಳಲ್ಲಿ ರಚಿಸಿದವರು. ಇಂಥವರ ಕೃತಿಯನ್ನು ಪ್ರಕಾಶಿಸುವುದು ಸೌಭಾಗ್ಯವಲ್ಲದೆ ಮತ್ತೇನು? ರಾಯರ ಸಾರಸ್ವತಸಿದ್ಧಿ-ಸಾಧನೆಯ ತಪಃಶಕ್ತಿಯು ಸದಾ ನಮ್ಮ ಚಟುವಟಿಕೆಗಳಿಗೆ ತೇಜಸ್ಸನ್ನೂ ಬಲವನ್ನೂ, ಒಳ್ಳೆಯ ಬದುಕಿನ ಬಗೆಗೆ ವಿಶ್ವಾಸವನ್ನೂ ನಂಬಿಕೆಯನ್ನೂ ಒದಗಿಸುವ ದಿಟವಾದ ಭಾರತತೀರ್ಥವೇ ಹೌದು.

'ಗಣಪತಿಯ ಕಲ್ಪನೆ' ಮೊದಲು ಪ್ರಕಟವಾದದ್ದು 1966ರಲ್ಲಿ. ಆ ಆವೃತ್ತಿಯನ್ನೇ ಇಲ್ಲಿ ಪೂರ್ಣವಾಗಿ ಪುನರ್ಮುದ್ರಿಸಿದ್ದೇವೆ. ರಾಯರೇ ಈಗ ಇದ್ದಿದ್ದರೆ ಖಂಡಿತವಾಗಿ ಇದರಲ್ಲಿ ಸಾಕಷ್ಟು ಬದಲಾವಣೆಗಳನ್ನು ಮಾಡುತ್ತಿದ್ದರೆಂಬುದರಲ್ಲಿ ಅನುಮಾನವಿಲ್ಲ; ಇಂಥದೊಂದು ಅವಕಾಶ ತಪ್ಪಿಹೋದುದಕ್ಕಾಗಿ ನಮಗೆ ವಿಷಾದವಿದೆ.

ಈ ಕೃತಿಯನ್ನು ಪ್ರಕಟಿಸಲು ಅನುಮತಿಯನ್ನು ನೀಡಿರುವುದಲ್ಲದೆ, ಅಭಿಜ್ಞಾನಕ್ಕೆ ಸದಾ ಬೆಂಬಲವಾಗಿರುವ ಪ್ರೊ. ಸಾ. ಕೃ. ರಾಮಚಂದ್ರರಾವ್ ಮೆಮೋರಿಯಲ್ ಟ್ರಸ್ಟ್‌ನ ಎಲ್ಲ ಬಂಧುಗಳಿಗೂ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

ಎಂದಿನಂತೆ ಈ ಯೋಜನೆಯಲ್ಲೂ ಸಕ್ರಿಯವಾಗಿ ಭಾಗಿಯಾಗಿ, ಹಲವು ವಿಧಗಳಲ್ಲಿ ಸಹಕರಿಸುವ ಮಿತ್ರ ಶ್ರೀ ಬಿ. ಎಸ್. ಸೂರ್ಯಪ್ರಕಾಶ್ ಅವರಿಗೆ ನನ್ನ ನಮನಗಳು. ಒಂದೆರಡು ಅಮೂಲ್ಯ ಸಲಹೆಗಳನ್ನು ನೀಡಿದ ಪ್ರೊ. ಕೆ. ಎಸ್. ಕಣ್ಣನ್ ಅವರಿಗೂ ಕೃತಜ್ಞತೆಗಳು. ಅಭಿಜ್ಞಾನದ ಎಲ್ಲ ಮಿತ್ರರನ್ನೂ ಈ ಸಂದರ್ಭದಲ್ಲಿ ನೆನೆಯುತ್ತಿದ್ದೇನೆ.

ಅಕ್ಷರವನ್ನು ಜೋಡಿಸಿಕೊಟ್ಟಿರುವ ಗಾಯತ್ರಿ ಪ್ರಿಂಟ್ಸ್‌ನ ಬಂಧುಗಳಿಗೂ, ವಿಶೇಷವಾಗಿ ಶ್ರೀ ರಜನೀಶ್ ಅವರಿಗೂ, ಮುದ್ರಕರಾದ 'ಲಕ್ಷ್ಮಿ ಮುದ್ರಣಾಲಯ' ಇವರಿಗೂ, ಆಕರ್ಷಕ ಮುಖಪುಟವನ್ನು ವಿನ್ಯಾಸಮಾಡಿ ಕೊಟ್ಟಿರುವ ಪ್ರಥಮ್ ವರ್ಲ್ಡ್ ಇವರಿಗೂ ನನ್ನ ವಂದನೆಗಳು.

ಆತ್ಮೀಯರಾದ ಓದುಗರೇ, ನಿಮ್ಮ ಬೆಂಬಲವೇ ನಮಗೆ ಶ್ರೀರಕ್ಷೆ. ಅಭಿಜ್ಞಾನವನ್ನು ನಿರಂತರವಾಗಿ ಪ್ರೋತ್ಸಾಹಿಸುತ್ತ ಬಂದಿರುವ ತಮ್ಮೆಲ್ಲರಿಗೂ ನಮ್ಮ ಅನಂತ ನಮನಗಳು. ಈ ಗ್ರಂಥಮಾಲಿಕೆಯ ಬಗೆಗೂ, ಈ ಕೃತಿಯ ಬಗೆಗೂ ದಯವಿಟ್ಟು ತಮ್ಮ ಅಮೂಲ್ಯ ಅಭಿಪ್ರಾಯಗಳನ್ನು ತಲಪಿಸಬೇಕಾಗಿ ಕೋರುತ್ತಿದ್ದೇನೆ.

ಎಂದರೋ ಮಹಾನುಭಾವುಲು ಅಂದರಿಕಿ ವಂದನಮುಲು

ಮಹಾಶಿವರಾತ್ರಿ
5-3-2008
ಬೆಂಗಳೂರು

—ಎಸ್. ಸೂರ್ಯಪ್ರಕಾಶ ಪಂಡಿತ್
*ಸಂಪಾದಕ-ಪ್ರಕಾಶಕ*
panditsurya@yahoo.co.in
suryaprakashpandit@rediffmail.com

# 'ಭಾರತತೀರ್ಥ'

ಗಾಯನ್ತಿ ದೇವಾಃ ಕಿಲ ಗೀತಕಾನಿ
ಧನ್ಯಾಸ್ತು ತೇ ಭಾರತಭೂಮಿಭಾಗೇ ।
ಸ್ವರ್ಗಾಪವರ್ಗಾಸ್ಪದಮಾರ್ಗಭೂತೇ
ಭವನ್ತಿ ಭೂಯಃ ಪುರುಷಾಃ ಸುರತ್ವಾತ್ ॥

*—ವಿಷ್ಣುಪುರಾಣ, 2.3.24*

Each race contributes something essential to the world's civilization in the course of its own self-expression and self-realization. .....The essential contribution of India, then is simply her Indianess.

—Ananda K. Coomaraswamy
*(Dance of Shiva)*

ನಾವು ಭಾರತೀಯರು; ಭಾರತದೇಶದಲ್ಲಿ ಹುಟ್ಟಿರುವವರು. ನಮ್ಮ ದೇಶವನ್ನು ತಾಯಿಯಂತೆ ಭಾವಸ್ತರದಲ್ಲಿ ಆರಾಧಿಸುವುದಿರಲಿ, ಒಂದು ರಾಷ್ಟ್ರವಾಗಿಯಾದರೂ ಇದರ ಸತ್ತ್ವ ನಮಗೆ ತಿಳಿದಿದೆಯೇ? ಇಲ್ಲಿ ಸ್ವಾಮಿ ವಿವೇಕಾನಂದರ ಮಾತುಗಳನ್ನು ಕೇಳುವುದೇ ಸರಿಯಾದೀತು—

"This is the ancient land where wisdom made its home before it went into any other country; ....Here is the same India whose soil has been trodden by the feet of the greatest sages that ever lived. Here first arose the doctrines of the immortality of the soul, the existence of a supervising God, an immanent God in nature and in man, and were the highest ideals of religion and philosophy have attained their culminating points. This is the land whence, like the tidal waves, spirituality and philosophy have again and again rushed out and deluged the world, and this is the land from whence once more such tides must proceed in order to bring life and vigour

into the decaying races of mankind. It is the same India which has withstood the shocks of centuries of hundreds of foreign invasions, of hundreds of upheavals of manners and customs. Its life is of the same nature as the soul, without begining and without end, immortal; and we are the children of such a country."

—*Lectures from Colombo to Almora*

ಆದರೆ ನಮಗಾದರೂ ಇಂಥ ನಮ್ಮ ತಾಯಿಯ ಹಿರಿಮೆ-ಗರಿಮೆಗಳ ಪರಿಚಯ ಎಷ್ಟಿದೆ? ನಮ್ಮ ಸಂಸ್ಕೃತಿ-ಪರಂಪರೆಗಳ ಅರಿವು-ಒಲವು ಎಷ್ಟಿದೆ? ಈ ಪ್ರಶ್ನೆಗಳನ್ನು ನಾವು ಎಂದಾದರೂ ನಮ್ಮನ್ನು ನಾವೇ ಕೇಳಿಕೊಂಡಿದ್ದೇವೆಯೆ? ವಿಲ್ ಡ್ಯೂರಂಟ್ ತನ್ನ ಮಹಾಸಾಧನೆಯಾದ 'The Story of Civilization' ಗ್ರಂಥಮಾಲೆಯಲ್ಲಿ ಭಾರತವನ್ನು ಕುರಿತ ಅಧ್ಯಾಯದ ಪ್ರಾರಂಭದಲ್ಲಿಯೇ ಹೇಳುತ್ತಾನೆ—

"Nothing should more deeply shame the modern student than the recency and inadequecy of his acquiantance with India."

ಈ ಮಾತು ವಿಲ್ ಡ್ಯೂರಂಟ್ ಪಾಶ್ಚಾತ್ಯಜಗತ್ತಿಗೆ ಹೇಳಿದ್ದಾದರೂ, ನಮಗೆ, ಎಂದರೆ ಭಾರತೀಯರಿಗೂ ಇದು ಇಂದೂ ಚೆನ್ನಾಗಿಯೇ ಒಪ್ಪತಕ್ಕದ್ದು.

ಭಾರತೀಯ ಪರಂಪರೆ-ಸಂಸ್ಕೃತಿಗಳನ್ನು ಒಂದೇ ಪದದಲ್ಲಿ ಹೇಳುವುದಾದರೆ 'ಭಾರತೀಯತೆ' ಎನ್ನಬಹುದು. "ನೀವು ಯಾವ ಹೆಸರಿನಿಂದಾದರೂ ಕರೆಯಿರಿ; ಆದರೆ ಈ ಭಾರತೀಯತೆಯನ್ನು ಅರಿಯುವ ಅನಿವಾರ್ಯತೆಯಾದರೂ ನಮಗೇನಿದೆ?"—ಇಂಥ ಪ್ರಶ್ನೆಯೂ ನಮ್ಮಲ್ಲಿ ಹಲವರಿಗೆ ಮೂಡಿಕೊಂಡರೆ ಅದೇನೂ ಅಚ್ಚರಿಯಲ್ಲ. ದಾರ್ಶನಿಕ ಆನಂದ ಕುಮಾರಸ್ವಾಮಿ ಅವರು ಈ ಅನಿವಾರ್ಯತೆಯನ್ನು ಸಕಾರಣವಾಗಿಯೇ ಗುರುತಿಸಿದ್ದಾರೆ. ಜಗತ್ತಿನಲ್ಲಿ ಇಂದು ಉಳಿದಿರುವ ಸಂಸ್ಕೃತಿಗಳಲ್ಲಿ ಅತಿ ಪ್ರಾಚೀನಸಂಸ್ಕೃತಿಯೆಂದರೆ ಭಾರತೀಯ ಸಂಸ್ಕೃತಿಯೇ. ಹೀಗೆಂದು, ಪ್ರಾಚೀನ ಎಂದ ಮಾತ್ರಕ್ಕೆ ವಿಶೇಷ ಮನ್ನಣೆಯನ್ನು ಕೊಡಬೇಕೆಂದಲ್ಲ. ಇತಿಹಾಸದುದ್ದಕ್ಕೂ ಭಾರತವು ಅಸಂಖ್ಯಾತ ಆಘಾತಗಳನ್ನು ಎದುರಿಸಿಯೂ ಜೀವಂತವಾಗಿ ಕಂಗೊಳಿಸುತ್ತಿದೆ. ಆದಕಾರಣ, ಇಂದಿನ ಹಲವು ಜನಸಮುದಾಯಗಳು ಎದುರಿಸುತ್ತಿರುವ ಸಮಸ್ಯೆಗಳಿಗೆ ತನ್ನ ಅನುಭವದ ಅರಿವಿನಿಂದ ಭಾರತವು ಪರಿಹಾರವನ್ನು ಒದಗಿಸಬಲ್ಲ ಗುರುಸ್ಥಾನದಲ್ಲಿದೆ; ಭಾರತದ ಗರಿಮೆ ಇದೊಂದೇ ಅಲ್ಲದಿದ್ದರೂ, ಇದೊಂದು ಪ್ರಯೋಜನಕ್ಕಾದರೂ ಭಾರತೀಯತೆಯ ಅರಿವು ಜಾಗೃತವಾದರೂ ಸಾಕೆನ್ನಲಡ್ಡಿಯಿಲ್ಲ.

"If we regard the world as a family of nations, then we shall be understand the position of India which has passed through many experiences and solved many problems which younger races have hardly get recognized."

—Anand K. Coomaraswamy
*Dance of Shiva*

ಮನುಕುಲದ ಉಳಿವಿಗೆ, ನಲವಿಗೆ, ಚೆಲುವಿಗೆ ಭಾರತೀಯತೆಯ ಆವಶ್ಯಕತೆಯಿದೆ ಎಂದಾಯಿತು. ಜಗತ್ತಿನ ಒಟ್ಟು ಏಳಿಗೆಗೂ ವ್ಯಕ್ತಿಯ ಉನ್ನತಿಗೂ, ಎಂದರೆ ನಮ್ಮ ಬಹಿರಂಗದ ಸ್ವಾಸ್ಥ್ಯಕ್ಕೂ ಅಂತರಂಗದ ಸ್ವಾಸ್ಥ್ಯಕ್ಕೂ ಔಷಧವಾಗಬಲ್ಲದ್ದು, ಚೈತನ್ಯದಾಯಕವಾದದ್ದು ಭಾರತೀಯತೆ. ಅಂತರಾತ್ಮ ಪಾರಮ್ಯ ಮತ್ತು ಅಧ್ಯಾತ್ಮದೃಷ್ಟಿಯ ಲೋಕವ್ಯವಹಾರ, ಇದನ್ನೇ ಆನಂದ ಕುಮಾರಸ್ವಾಮಿ ಅವರು ಹೇಳಿದ್ದು—"ಮನುಕುಲಕ್ಕೆ ಭಾರತ ಕೊಟ್ಟಿರುವ ಕೊಡುಗೆಯೆಂದರೆ ಅದು ಭಾರತೀಯತೆಯೇ ಹೌದು"—ಎಂದು.

"ಭಾರತೀಯರಿಗೆ ಭಾರತೀಯತೆ ಎಂಬುದು ಸಹಜವೇ ಹೌದು; ಭಾರತದಲ್ಲಿ ಹುಟ್ಟಿರುವವರು ಮಾಡುವುದೆಲ್ಲವೂ ಭಾರತೀಯತೆಯಲ್ಲದೆ ಮತ್ತೇನು? ಆದುದರಿಂದ ಈ ಭಾರತೀಯತೆಯನ್ನು ಅರಿಯಲು ವಿಶೇಷ ಪ್ರಯತ್ನವಾದರೂ ಏಕೆ?" ಈ ಮಾತು ತಾರ್ಕಿಕ ನೆಲೆಯಲ್ಲಿ ದಿಟವಾಗಿ ಕಂಡರೂ ವಾಸ್ತವದಲ್ಲಿ ಅಬದ್ಧವಾಗಿದೆ. ಇಂದು ಭಾರತೀಯರೇ ಭಾರತೀಯತೆಯಿಂದ ದೂರವಾಗುತ್ತಿರುವ, ಭಾರತೀಯತೆಯನ್ನು ದೂರುತ್ತಿರುವ ನಿದರ್ಶನಗಳೇ ಹೆಚ್ಚು ಹೆಚ್ಚು ಕಾಣಿಸುತ್ತಿವೆ. ಹೀಗಾಗಿಯೆ, ಭಾರತೀಯತೆಯನ್ನು ಕಂಡುಕೊಳ್ಳಬೇಕಾದ ದಿಟವಾದ ಆವಶ್ಯಕತೆಯಿರುವುದು ಭಾರತೀಯರಿಗೇ ಎನ್ನುವಂತಾಗಿದೆ; ನಮ್ಮತನದ ಅರಿವು ಮೊದಲಿಗೆ ನಮಗೇ ಒದಗಬೇಕಾಗಿದೆ. ಸ್ವಾಮಿ ವಿವೇಕಾನಂದರ ಕರೆಯನ್ನು ನಾವಿಲ್ಲಿ ನೆನಪಿಸಿಕೊಳ್ಳಬೇಕು—

"Children of India,..... many times have I been told that looking into the past only degenerates and leads to nothing and that we should look to the future. That is true. But out of past is built the future. Look back, therefore, as for as you can, drink deep of the eternal fountains that are behind. Our ancestors were great..... We must learn the elements of our being, the blood that courses in our vains. We must have faith in that blood and what it did in the past; we must build an India yet greater than what she has been."

ಇಲ್ಲಿ ಇನ್ನೊಂದು ಪ್ರಶ್ನೆ ಏಳಬಹುದು—'ಭಾರತೀಯತೆ ಎಂದರೆ ಅದೊಂದು ಭೌಗೋಳಿಕ ವಿವರಣೆಯೆ?' ಖಂಡಿತವಾಗಿಯೂ ಅಲ್ಲ; ಭಾರತೀಯತೆ ಎಂಬುದು ಒಂದು ಜೀವನಪದ್ಧತಿ, ಜೀವನದರ್ಶನ. ಹೀಗಾಗಿಯೇ ಇದು ಎಲ್ಲ ಜೀವಿಗಳಿಗೂ ಬೇಕಾದ ತತ್ತ್ವವಾಗಿರುವುದು. ಕವಿ ರವೀಂದ್ರರ ಮಾತುಗಳಲ್ಲಿ ಭಾರತದ ಚೇತನವು ಸಮರ್ಥವಾಗಿ ಪ್ರತಿಬಿಂಬಿತವಾಗಿದೆ—

"I love India, not because I cultivate the idolatry of geography, not because I have had the chance to be born in her soil, but because she has saved through tumultnous ages the living words that have issued from the illuminated cousciousness of her great sons—*Satyam Jñānam Anantam Brahma*: *Brahma* is Truth, *Brahma* is Wisdom, *Brahma* is Infinite; *Śāntam Śivam Advaitam*: Peace is *Brahma*, goodness is in *Brahma*, and the Unity of all beings.

Thus we have come to know that what India truly seeks is not a peace which is in negation, or in some mechanical adjustment, but that which is in *Śivam*, in goodness; which is in *Advaitam*, in the truth of perfect union; that India does not enjoin her children to cease from *Karma*, but to perform their *karma* in the presence of the Eternal, with the pure knowledge of the spiritual meaning of existence; that is the true prayer of Mother India:

'He who is one, who is above all colour distinctions, who dispenses the inherent needs of men of all colours, who comprehends all things from their beginning to the end, let him unite us to one another with wisdom, which is the wisdom of goodness'."

ಎಂದರೆ, ವ್ಯಷ್ಟಿಹಿತವನ್ನೂ ಸಮಷ್ಟಿಹಿತವನ್ನೂ ಪರಸ್ಪರ ಪೂರಕವಾಗಿ ಕಾಣುವಂಥ, ಅಭ್ಯುದಯ-ನಿಃಶ್ರೇಯಸ್ಸುಗಳೆರಡನ್ನೂ ಒಪ್ಪಿಕೊಂಡಂಥ, ಪ್ರವೃತ್ತಿ-ನಿವೃತ್ತಿಮಾರ್ಗಗಳೆರಡೂ ಗುರಿಯನ್ನೂ ತಲಪಿಸಬಲ್ಲ ವಾಹಕಗಳಾಗಿ ಸ್ವೀಕರಿಸಿದಂಥ, ಜಗತ್ತಿನ ಎಲ್ಲ ವಿವರಗಳಲ್ಲೂ ಏಕಮೂಲವನ್ನೇ ಕಾಣುವಂಥ, ಲೌಕಿಕದಲ್ಲಿ ಅಲೌಕಿಕವನ್ನೂ ಅಲೌಕಿಕದಲ್ಲಿ ಲೌಕಿಕವನ್ನೂ ಆಸ್ವಾದಿಸಬಲ್ಲ ಆಧ್ಯಾತ್ಮಿಕದೃಷ್ಟಿಯೇ ಭಾರತೀಯತೆ. ಆನಂದ ಕುಮಾರಸ್ವಾಮಿಯವರ ಮಾತೂ ಕೂಡ ಇಲ್ಲಿ ಮನನೀಯ—

"The heart and essence of the Indian experience is to be found in a constant intuition of the unity of all life, and the instinctive and ineradicable conviction that the recognition of this unity is the highest good and the uttermost freedom."

ಆದರೆ ಕೆಲವರು ಅಬದ್ಧವ್ಯಕ್ತಿಗಳ ವಿಕೃತಚಿಂತನೆಗಳ ದೆಸೆಯಿಂದಾಗಿ ಆಧ್ಯಾತ್ಮಿಕತೆ ಎಂಬುದು ಇಂದು ತೀರಸಂಕುಚಿತ ಅರ್ಥವ್ಯಾಪ್ತಿಗೆ ಬಲಿಯಾಗಿಬಿಟ್ಟಿದೆ. ದಿಟವಾಗಿ ನೋಡಿದರೆ, ಆಧ್ಯಾತ್ಮಿಕತೆ ಎಂಬುದು ಖಾಲಿತನವಲ್ಲ, ಬಂಜರುನೆಲವಲ್ಲ; ಇದು ತುಂಬುತನ, ಬಾಳಿನ ಫಲವತ್ತತೆ. ಆಧ್ಯಾತ್ಮಿಕತೆ ಎಂಬುದು ಗಾಳಿಗೋಪುರವಲ್ಲ; ಇದು ಬದುಕಿನ ಭವ್ಯಸೌಧಕ್ಕೆ ಆಧಾರವಾಗಿರುವ ಅಡಿಪಾಯ. ಕಣ್ಣಿಗೆ ಕಾಣದ ಬುನಾದಿಯ ಮೇಲೆಯೇ ಕಣ್ಣಿಗೆ ಕಾಣುವ ಗುಡಿಯ ಅಸ್ತಿತ್ವ ಇರುವುದಷ್ಟೆ; ಆಲಯದ ತಳಪಾಯಕ್ಕೂ, ನಡುವಿನ ಕಲಾವೈಭವಕ್ಕೂ, ಮೇಲಣ ಕಲಶದ ಹೊಳಪಿಗೂ ಒಂದು ಸಂಬಂಧಸೂತ್ರವಿದ್ದಾಗಲಷ್ಟೆ ಜೀವನ ಎಂಬ ಮೂರ್ತಿಗೆ ಶಕ್ತಿ, ಚೈತನ್ಯ, ಪೂಜೆ-ಪುರಸ್ಕಾರಗಳು. ಹೀಗೆ, ಹಲವು ಹಂತಗಳಲ್ಲಿ, ವಿವರಗಳಲ್ಲಿ ಹರಡಿಕೊಂಡಿರುವ ಜೀವನವನ್ನು ಸಮಗ್ರವಾಗಿ, ಸರಿಯಾಗಿ, ಸುಂದರವಾಗಿ, ಸುಲಭವಾಗಿ ಗ್ರಹಿಸುವ ಒಂದಾನೊಂದು ಶಕ್ತಿಯೇ, ಮನೋಧರ್ಮವೇ, ಕಾಣ್ಕೆಯೇ ನಮ್ಮ ಋಷಿ-ಮುನಿಗಳು ನಿರೂಪಿಸಿದ ಆಧ್ಯಾತ್ಮಿಕತೆ. ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳೆಂಬ ನಾಲ್ಕು ಪುರುಷಾರ್ಥಗಳ ಮೀಮಾಂಸೆಯನ್ನು ನಡಸಿದಾಗ ಋಷಿಗಳ ಸಮಗ್ರದೃಷ್ಟಿಯ ವೈಶಾಲ್ಯವು ನಮಗೆ ತಿಳಿಯುವುದು. ಬದುಕು ದಿಟವಾಗತಕ್ಕದ್ದು, ಒಳಿತಾಗತಕ್ಕದ್ದು, ಚೆಲುವಾಗತಕ್ಕದ್ದು—ಇದು ನಮ್ಮ ಪೂರ್ವಜರ ಜೀವನದ ಗುರಿಯಾಗಿದ್ದಿತು. ಈ ಗುರಿಯನ್ನು ಮುಟ್ಟಲು ದಾರಿಯಾಗಿ ಅವರು ಕಂಡುಕೊಂಡ ಮಹಾದರ್ಶನವೇ ಪುರುಷಾರ್ಥಚತುಷ್ಟಯ; ಇದರ ಸಾಫಲ್ಯದಲ್ಲಿಯೇ ವ್ಯಕ್ತಿಯ ಸಾರ್ಥಕ್ಯವೂ, ಸಮಾಜದ ಸಾರ್ಥಕ್ಯವೂ ಅಡಗಿದೆ. ಈ ಸಾರ್ಥಕಜೀವನದ ಶಿಖರಾರೋಹಣಕ್ಕೆ ಅವರು ಸಿದ್ಧಮಾಡಿಕೊಂಡ ಸೋಪಾನಗಳಾದರೂ ಎಷ್ಟೊಂದು! ಒಂದೇ ಗುರಿಗೆ ಅಸಂಖ್ಯವಾಗಿರುವ ಈ ಮಾರ್ಗಗಳನ್ನು ಶ್ರೀ ಅರವಿಂದರು ನಿಚ್ಚೞಗಿನಿಂದಲೇ ಗುರುತಿಸುತ್ತಾರೆ, ಹೀಗೆ—

"..., spirituality itself does not flourish on earth in the void. When look at the past of India, what strikes us next is her stupendous vitality, her inexhaustible power of life and joy of life, her almost unimaginably prolific creativeness....., she has been creating abunduntly and incessantly, lavishly, with an inexhaustible

many-sideness, republics and kingoms and empires, philosophies and cosmogonies and sciences and creeds and arts and poems and all kinds of monuments, palaces and temples and public works, communities and societies and religions orders, laws and codes and rituals, physical sciences, psychic sciences, systems of Yoga, system of politics and administration, arts spiritual and arts worldly, trades, industries, fine-crafts,—the list is endless and in each item there is almost a plethora of activity.....There is no historical parallel for an intellectual labour and activity before the invention of printing and the facilities of modern science,...... it embraced all life, politics and society, all the arts from painting to dancing, all the sixty-four accomplishments, everything then known that could be useful to life or interesting to mind, ever, for instance, to such practical side minutive as the breeding and traning of horses and elephants, each of which had its art, its apparatus of technical terms, its copious literature.....On one side there is an insatiable curiosity, the desire of life to know itself in very detail, on the other a spirit of organisation and scrupulous order, .....the rational, ethical and aesthetic mind each at a high intensity of action, created the harmony of the ancient Indian culture."

—*The Renaissance in India*

ಇಲ್ಲಿ ಭಾರತೀಯರ ಸಿದ್ಧಿ-ಸಾಧನೆ-ಸಾಮರಸ್ಯಗಳ ಮಹಾದರ್ಶನವೇ ಅನಾವರಣಗೊಂಡಿದೆ. ಆಧ್ಯಾತ್ಮಿಕತೆಯ ನೆವದಲ್ಲಿ ಭಾರತೀಯರು ಪ್ರಪಂಚವನ್ನು ತೊರೆದವರಲ್ಲ; ಎಚ್ಚರದಲ್ಲಿ ಕನಸನ್ನೂ, ಕನಸಿನಲ್ಲಿ ಎಚ್ಚರವನ್ನೂ ಮರೆತವರಲ್ಲ. ಹೊರಗಣ ವಿವರಗಳನ್ನು ನಿರಾಕರಿಸುವುದೇ ಆಧ್ಯಾತ್ಮಿಕತೆಯಲ್ಲ; ಅದರ ಹಿಂದಿರುವ ಏಕತೆಯನ್ನೂ ವಸ್ತುವಿವೇಕವನ್ನೂ ಗ್ರಹಿಸಿ, ಅದರೊಂದಿಗೆ ಒಂದಾಗುತ್ತಲೇ ಕ್ರಮೇಣ ಬೇರೆಯಾಗುವ—ಭೂಮಿಯ ಸತ್ತ್ವವನ್ನು ಹೀರಿಕೊಳ್ಳುತ್ತ, ಕರಟದ ರಕ್ಷಣೆಯಲ್ಲಿಯೇ ನೀರು ಕೊಬ್ಬರಿಯಾಗಿ ಮಾರ್ಪಡುತ್ತ, ಕೊನೆಗೆ ಕರಟದಿಂದ ಬೇರ್ಪಡುವಂಥ—ಪ್ರಕ್ರಿಯೆಯೇ ಆಧ್ಯಾತ್ಮಿಕತೆ; ಎಂದರೆ ಫಲಾಪೇಕ್ಷೆಯಿಲ್ಲದ ಕರ್ಮಾನುಷ್ಠಾನ. ಇಂಥ ಸಹಜಜೀವನವೇ ಸ್ವಾತಂತ್ರ್ಯ ಎನಿಸಿಕೊಳ್ಳುವುದು. ಜೀವನದ ಎಲ್ಲ ಹಾದಿಗಳೂ ಈ ಸ್ವಾತಂತ್ರ್ಯದ ಕಡೆಗೆ ನಮ್ಮನ್ನು ಒಯ್ಯುವಂತೆ ಮಾಡುವುದೇ ಭಾರತೀಯತೆ.

"..... this science [*Adhyātma-vidya*] recognizes the unity of all life—one source, one essence, and, one goal—and regards the realisation of this unity as the highest good, bliss, salvation, freedom, the final purpose of life. This is for Hindu thinkers eternal life; not an eternity in time, but the recognition here and now of All things in the Self and Self in All. This inseperable unity of the material and spiritual world is made the foundation of the Indian culture and determines the whole character of her social ideals."

—*Dance of Shiva*

ಗೌರವಿಸು ಜೀವನವ, ಗೌರವಿಸು ಚೇತನವ ।
ಆರದೋ ಜಗವೆಂದು ಭೇದವೆಣಿಸದಿರು ॥
ಹೋರುವುದೆ ಜೀವನ ಸಮೃದ್ಧಿಗೋಸುಗ ನಿನಗೆ ।
ದಾರಿಯಾತ್ಮೋನ್ನತಿಗೆ—ಮಂಕುತಿಮ್ಮ ॥

ಒಮ್ಮೆ ಹೂದೋಟದಲಿ, ಒಮ್ಮೆ ಕೆಳೆಕೂಟದಲಿ ।
ಒಮ್ಮೆ ಸಂಗೀತದಲಿ, ಒಮ್ಮೆ ಶಾಸ್ತ್ರದಲಿ ॥
ಒಮ್ಮೆ ಸಂಸಾರದಲಿ, ಮತ್ತೊಮ್ಮೆ ಮೌನದಲಿ ।
ಬ್ರಹ್ಮಾನುಭವಿಯಾಗೊ—ಮಂಕುತಿಮ್ಮ ॥

—ಇದು ಭಾರತೀಯ ಚಿತ್ತ, ಮಾನಸಿಕತೆ; ಇದೇ ಭಾರತೀಯಹೃದಯ. ಈ ವಿಧವಾಗಿ, ಎಲ್ಲದರಲ್ಲೂ ಎಲ್ಲೆಲ್ಲೂ ಪರತತ್ತ್ವವನ್ನು ಕಂಡ ಋಷಿಮನಸ್ಸು ಹೀಗೆ ಹಾಡಿದ್ದು ಸಹಜವಾಗಿಯೇ ಇದೆ—

ಪಶ್ಯೇಮ ಶರದಃ ಶತಮ್ । ಜೀವೇಮ ಶರದಃ ಶತಮ್ ।
ಶೃಣಯಾಮ ಶರದಃ ಶತಮ್ । ಪ್ರ ಬ್ರವಾಮ ಶರದಃ ಶತಮ್ ।
ಅದೀನಾಃ ಸ್ಯಾಮ ಶರದಃ ಶತಮ್ । ಭೂಯಶ್ಚ ಶರದಃ ಶತಾತ್ ॥

—*ಯಜುರ್ವೇದ, 36. 24*

*(ನೂರು ಸಂವತ್ಸರಗಳು ನಾವು ನೋಡೋಣವಾಗಲಿ; ನೂರು ಸಂವತ್ಸರಗಳು ನಾವು ಬಾಳೋಣವಾಗಲಿ; ನೂರು ಸಂವತ್ಸರಗಳು ನಾವು ಕೇಳೋಣವಾಗಲಿ; ನೂರು ಸಂವತ್ಸರಗಳು ಚೆನ್ನಾಗಿ ನಾವು ಮಾತಾಡೋಣ ವಾಗಲಿ; ನೂರು ಸಂವತ್ಸರಗಳು ತಲೆಯೆತ್ತಿ ಬದುಕೋಣವಾಗಲಿ. ಇವು ನೂರು ಸಂವತ್ಸರಗಳನ್ನೂ ದಾಟಲಿ.)*

ಅನೇಕದಲ್ಲಿರುವ ಏಕತೆಯನ್ನು ಕಂಡು ಬದುಕಿನ ವೈವಿಧ್ಯವನ್ನು ನಮ್ಮ ಪ್ರಾಚೀನರು ಪೂರ್ಣವಾಗಿ ಸ್ವೀಕರಿಸಿದರು, ಸವಿದರು. ತುಂಬು ಜೀವನಕ್ಕಾಗಿಯೇ ಅವರು ಪರಿತಪಿಸಿದರು, ಪ್ರಾರ್ಥಿಸಿದರು. ಹೀಗೆಂದು ಬದುಕಿನ ವಿವರಗಳಿಗೆ ಸೋತು, ದಿಟವಾದ ಅದರ ಮೂಲತತ್ತ್ವವನ್ನು ಮರೆತವರಲ್ಲ—ಅವರು ಅಲೆಗಳ ಹೊಡೆತಕ್ಕೆ ಸಿಕ್ಕು ಮುಳುಗಿದವರಲ್ಲ, ಅವುಗಳ ನೆರವಿನಿಂದಲೇ ಸಾಗರವನ್ನು ದಾಟಿದವರು—ಎಂಬುದನ್ನೂ ನಾವು ಮರೆಯಬಾರದು.

ಚಕ್ಷುರ್ ನೋ ಧೇಹಿ ಚಕ್ಷುಷೇ ಚಕ್ಷುರ್ ವಿಖ್ಯೈ ತನೂಭ್ಯಃ ।
ಸಂ ಚೇದಂ ವಿ ಚ ಪಶ್ಯೇಮ ॥

*—ಋಗ್ವೇದ, 10.158.4*

*(ಎಲೈ ಸೂರ್ಯನೇ, ನಾವು ವಸ್ತುಗಳ ರೂಪಗಳನ್ನು ನೋಡುವಂತಾಗಲು ನಮಗೆ ನಿನ್ನ ತೇಜಸ್ಸನ್ನೂ ದೃಷ್ಟಿಯನ್ನೂ ಕೊಡು. ಈ ಸಮಸ್ತ ಜಗತ್ತಿನಲ್ಲಿರುವ ವಿವಿಧ ವಸ್ತುಗಳನ್ನು ನಾವು ಚೆನ್ನಾಗಿ ನೋಡುವಂತಾಗಲಿ).*

ಇಲ್ಲಿ ಸೂರ್ಯನಿಂದ ಕೇವಲ ಹೊರಗಣ್ಣಿನ ನೋಟವನ್ನಷ್ಟೆ ಬಯಸಿಲ್ಲ, ಒಳಗಣ್ಣಿನ ದರ್ಶನಕ್ಕೂ ಪ್ರಾರ್ಥಿಸಲಾಗಿದೆ.

ಭಾರತೀಯಮನಸ್ಸು ಎಂದಿಗೂ ಸ್ವಾರ್ಥದಿಂದ ಪ್ರವರ್ತಿತವಾಗದು. ಸಾಂಘಿಕಹಿತದಲ್ಲಿಯೇ ತನ್ನ ಹಿತವೂ ಅಂತರ್ಗತವಾಗಿದೆ ಎಂಬುದರಲ್ಲಿಯೇ ಭಾರತೀಯತೆಗೆ ವಿಶ್ವಾಸ. ಪುರುಷಾರ್ಥ ಹಾಗೂ ಜೀವನ್ಮುಕ್ತನ ಕಲ್ಪನೆಯ ಹಿಂದಿರುವ ಸ್ವಾರಸ್ಯವನ್ನೂ ವೈಶಾಲ್ಯವನ್ನೂ ಇಲ್ಲಿ ನೆನೆಯತಕ್ಕದ್ದು. ಸಮಾಜಾಭಿಮುಖವಾದ ನೆಲೆಯಲ್ಲಿಯೇ ಹೊರಟದ್ದು ಈ ಪ್ರಾರ್ಥನೆ—

ಸಂ ಗಚ್ಛಧ್ವಂ ಸಂ ವದಧ್ವಂ ಸಂ ವೋ ಮನಾಂಸಿ ಜಾನತಾಮ್ ।
ಸಮಾನೀ ವ ಆಕೂತಿಃ ಸಮಾನಾ ಹೃದಯಾನಿ ವಃ
ಸಮಾನಮ್ ಅಸ್ತು ವೋ ಮನೋ ಯಥಾ ವಃ ಸುಸಹಾಸತಿ ॥

*—ಋಗ್ವೇದ, 10.191.2-4; ಅಥರ್ವವೇದ, 6.64.1-3*

*(ಯಾವಾಗಲೂ ಐಕ್ಯದಿಂದಿರಿ, ಜೊತೆಯಲ್ಲಿಯೇ ನಡೆಯಿರಿ, ಒಂದೇ ಅಭಿಪ್ರಾಯದಿಂದ ಮಾತನಾಡಿರಿ, ಮನಸ್ಸುಗಳು ಒಂದಾಗಿರಲಿ. ಪರಸ್ಪರ ಏಕತೆಯು ಮೂಡುವುದಕ್ಕಾಗಿ ನಿಮ್ಮ ಉದ್ದೇಶವೂ, ನಿಮ್ಮ ಅಪೇಕ್ಷೆಗಳೂ, ನಿಮ್ಮ ಆಲೋಚನೆಗಳೂ ಒಂದೇ ಆಗಿರಲಿ.)*

ಜಗದ ಕಲ್ಯಾಣದೊಳಗಾತ್ಮ ಕಲ್ಯಾಣವನು ।
ಜಗದ ಬೀದಿಗಳೊಳು ನಿಜಾತ್ಮಯಾತ್ರೆಯನು ॥
ಜಗದ ಜೀವಿತದಿ ನಿಜಜೀವಿತದ ಪೂರ್ತಿಯನು ।
ಬಗೆಯಲರಿತವನೆ ಸುಖಿ—ಮಂಕುತಿಮ್ಮ ॥

ಹೀಗೆಂದು, ತನ್ನತನವನ್ನು ಎಂದರೆ, ಆತ್ಮೋನ್ನತಿಯನ್ನು ತೊರೆಯುವ ಯಾವೊಂದು ಕಲಾಪವೂ ಸೊಗಯಿಸದು; 'ತನ್ನ' ಆರೋಗ್ಯದಲ್ಲಿಯೇ ಸಮಾಜದ ಆರೋಗ್ಯವೂ ಅವಲಂಬಿತವಾಗಿದೆ. ಈ ನೆಲೆಯಿಂದ ಹೊರಟ ಮಹಾಭಾರತದ ಈ ಆದರ್ಶವೂ ಇಲ್ಲಿ ಮನನೀಯ—

ತ್ಯಜೇದೇಕಂ ಕುಲಸ್ಯಾರ್ಥೇ ಗ್ರಾಮಸ್ಯಾರ್ಥೇ ಕುಲಂ ತ್ಯಜೇತ್ ।
ಗ್ರಾಮಂ ಜನಪದಸ್ಯಾರ್ಥೇ ಆತ್ಮಾರ್ಥೇ ಪೃಥಿವೀಂ ತ್ಯಜೇತ್ ॥

*(ಕುಟುಂಬದ ಒಳಿತಿಗಾಗಿ ವ್ಯಕ್ತಿಯನ್ನೂ, ಊರಿನ ಒಳಿತಿಗಾಗಿ ಕುಟುಂಬವನ್ನೂ, ನಾಡಿನ ಒಳಿತಿಗಾಗಿ ಊರನ್ನೂ, ತನ್ನ ಆತ್ಮದ ಒಳಿತಿಗಾಗಿ ಈ ಭೂಮಿಯನ್ನೂ ಬಿಡತಕ್ಕದ್ದು.)*

ಹೊಣೆಗಾರಿಕೆ ಮತ್ತು ಸ್ವಾತಂತ್ರ್ಯ—ಇವೆರಡರ ನಡುವೆ ಸಾಮರಸ್ಯವನ್ನು ಸಾಧಿಸಿದ್ದು ಭಾರತೀಯತೆಯ ಅನನ್ಯತೆಯೇ ಹೌದು.

ಭಾರತೀಯತೆಯನ್ನು ಎತ್ತಿಹಿಡಿದಿರುವ ಈ ಲೋಕಕಲ್ಯಾಣಕರ ಭಾವ ಬುದ್ಧಿಗಳಿಗೆ ಯಾವ ವಿಧದ ಭೇದಭಾವಗಳ ಸಂಕೋಲೆಗಳೂ ಇರದು; ಎಲ್ಲೆಲ್ಲೂ ಮಂಗಳಕರವಾದ ದನಿಯು ಎಂದೆಂದೂ ಮೊಳಗುತ್ತಿರಬೇಕೆಂಬುದೇ ಈ ನೆಲದ ತುಡಿತವಾಗಿರುವುದು—

ಯಥೇಮಾಂ ವಾಚಂ ಕಲ್ಯಾಣೀಮಾವದಾನಿ ಜನೇಭ್ಯಃ । ಬ್ರಹ್ಮರಾಜನ್ಯಾಭ್ಯಾಂ
ಶೂದ್ರಾಯ ಚಾರ್ಯಾಯ ಚ ಸ್ವಾಯ ಚಾರಣಾಯ ಚ ॥

*—ಯಜುರ್ವೇದ, 26.2*

*(ನನ್ನೀ ಮಂಗಳಕರವಾದ ಮಾತುಗಳು ಎಲ್ಲರಿಗೂ ತಲಪಲಿ—ಬ್ರಾಹ್ಮಣರಿಗೆ, ಕ್ಷತ್ರಿಯರಿಗೆ, ಶೂದ್ರರಿಗೆ ಮತ್ತು ವೈಶ್ಯರಿಗೆ; ಮಾತ್ರವಲ್ಲ, ನನ್ನವರಿಗೆ, ಹೊರಗಿನವರಿಗೆ ಕೂಡ ಇವು ಮುಟ್ಟಲಿ.)*

ಆದರೆ ತನ್ನ ಹಿತಸಾಧನೆಯಲ್ಲಾಗಲೀ ಪರಿಸರದ ಹಿತಸ್ಥಾಪನೆಯಲ್ಲಾಗಲೀ

ಅಕ್ರಮಗಳಿಗೆ ಆಸ್ಪದ ಕೊಡದ ಋತಪ್ರಜ್ಞೆಯು ಭಾರತೀಯತೆಯ ವ್ರತಬುದ್ಧಿಗೆ ಮತ್ತೊಂದು ನಿದರ್ಶನ—

ಮಧು ವಾತಾ ಋತಾಯತೇ ಮಧು ಕ್ಷರಂತಿ ಸಿಂಧವಃ ।

*—ಋಗ್ವೇದ, 1.90*

*(ಋತದ ಹಾದಿಯಲ್ಲಿ ನಿರತನಾಗಿರುವವನಿಗೆ ವಾಯುಗಳು ಮಧುರವಾದ ಕರ್ಮಫಲಗಳನ್ನು ಸುರಿಸುತ್ತವೆ. ಪ್ರವಾಹರೂಪದಲ್ಲಿರುವ ನದಿಗಳು ತಮ್ಮ ಮಧುರವಾದ ರಸವನ್ನು ಹರಿಸುತ್ತವೆ.)*

ಹೀಗೆಂದು ಉದಾತ್ತತೆ, ಆಧ್ಯಾತ್ಮಿಕತೆ, ಸರಸತೆ, ಸರಳತೆ, ಸಭ್ಯತೆ—ಇವೆಲ್ಲವೂ ಭಾರತಕ್ಕಷ್ಟೆ ಸೀಮಿತವಾದ ವಿವರಗಳೆಂಬುದನ್ನು ದಿಟವಾದ ಭಾರತೀಯನೆಂದೂ ಯೋಚಿಸಲಾರ; ಇಂಥ ಹಠಬುದ್ಧಿಗೆ ಅವನಲ್ಲಿ ಜಾಗವೇ ಇರದು. ಎಲ್ಲೆಲ್ಲೂ ಇರುವುದು ಒಂದೇ ತತ್ತ್ವ ಎಂದಾದ ಮೇಲೆ ಶ್ರೇಷ್ಠ-ಕನಿಷ್ಠಗಳ ಗೊಡವೆಗೆ ಅವಕಾಶವಾದರೂ ಎಕಿದ್ದೀತು?

ಆ ನೋ ಭದ್ರಾಃ ಕ್ರತವೋ ಯಂತು ವಿಶ್ವತಃ । *—ಋಗ್ವೇದ, 1.89.1*

*(ಎಲ್ಲ ಕಡೆಯಿಂದಲೂ ಒಳ್ಳೆಯ ವಿಚಾರಗಳು ನಮ್ಮತ್ತ ಬರಲಿ.)*

ಯೋ ದೇವಾನಾಂ ನಾಮಧಾ ಏಕ ಏವ *—ಋಗ್ವೇದ, 10.82.3*

*(ಎಲ್ಲ ದೇವತೆಗಳ ನಾಮನಿರ್ದೇಶಕನಾಗಿರುವ ಅವನು ಒಬ್ಬನೇ ಆಗಿದ್ದಾನೆ.)*

ಆಕಾಶಾತ್ಪತಿತಂ ತೋಯಂ ಯಥಾ ಗಚ್ಛತಿ ಸಾಗರಮ್ ।
ಸರ್ವದೇವ ನಮಸ್ಕಾರಃ ಕೇಶವಂ ಪ್ರತಿಗಚ್ಛತಿ ॥

*(ಆಗಸದಿಂದ ಬಿದ್ದ ನೀರು ಹೇಗೆ ಸಮುದ್ರವನ್ನು ಸೇರುವುದೋ ಹಾಗೆಯೇ ಎಲ್ಲ ದೇವರಿಗೂ ಸಲ್ಲಿಸಿದ ನಮನಗಳು ಕೇಶವನಿಗೇ ಸೇರುತ್ತವೆ.)*

ವೈಶ್ವಿಕತತ್ತ್ವದ ಅನುಸಂಧಾನವೇ ಭಾರತೀಯರ ನಿತ್ಯಪ್ರಾರ್ಥನೆ. ಜಗತ್ತಿನ ಹಲವು ಸಂಸ್ಕೃತಿಗಳನ್ನು, ತತ್ತ್ವಶಾಸ್ತ್ರದ ಪ್ರಬೇಧಗಳನ್ನು ಅವುಗಳ ಮೂಲಗ್ರಂಥಗಳಲ್ಲಿಯೇ ಅಧ್ಯಯನ ಮಾಡಿದ ಆನಂದ ಕುಮಾರಸ್ವಾಮಿಯವರೆನ್ನುತ್ತಾರೆ—

"All that India can offer to the world proceeds from her philosophy. This philosophy is not, indeed, unknown to others—

it is equally the gospel of Jesus and of Blake, Lao Tze, and Rumi—but nowhere else has it been made essential basis of sociology and education. Where the Indian mind differs from the average mind of modern Europe is in its view of the value of philosophy. In Europe and America the study of philosophy is regarded as an end in itself;..... In India, on the contrary, philosophy is not regarded primarily as a mental gymnastic, but rather and with deep religious conviction, as our salvation (*moksha*) from the ignorance (*avidya*) which forever hides from our eyes the vision of reality. Philosophy is the key to the map of life, by which we are setforth the meaning of life and the means of life and the means of attaining its goal."

—*Dance of Shiva*

ಒಂದನ್ನಂತೂ ಧೈರ್ಯದಿಂದ ಹೇಳಬಹುದು—ಬೇರೆಡೆ ವಿರಳವಾಗಿರುವ ಜಿಜ್ಞಾಸೆ, ತತ್ತ್ವಾನ್ವೇಷಣೆ, ಆಧ್ಯಾತ್ಮಿಕತೆ ಭಾರತದಲ್ಲಿ ಸಹಜವಾಗಿದ್ದಿತು; ನಮಗೆ ಅಕ್ಕಿಯಲ್ಲಿ ಕಲ್ಲನ್ನು ಹುಡುಕುವುದು ಸುಲಭವೋ, ಕಲ್ಲಿನಲ್ಲಿ ಅಕ್ಕಿಯನ್ನು ಹುಡುಕುವುದು ಸುಲಭವೋ—ಎಂಬ ನ್ಯಾಯದಂತೆ ವ್ಯಾಪಕತೆಯಿಂದಾಗಿ 'ಆಧ್ಯಾತ್ಮಿಕತೆ ಎಂದರೆ ಭಾರತ'—ಎಂಬ ಸಮೀಕರಣವು ಮೂಡುತ್ತದೆ, ಅಷ್ಟೆ. ಮಾತ್ರವಲ್ಲ, ಭಾರತದಲ್ಲಿ ಧರ್ಮವನ್ನು 'ಭಾರತೀಯಧರ್ಮ' ಎನ್ನದೆ 'ಸನಾತನಧರ್ಮ' ಎಂಬ ಅಭಿಧಾನದಿಂದಲೇ ವ್ಯವಹರಿಸುವುದನ್ನೂ ಇಲ್ಲಿ ನೆನೆಯತಕ್ಕದ್ದು. ಆದುದರಿಂದಲೇ 'ಎಲ್ಲರ ರೋಗವನ್ನೂ ಪರಿಹರಿಸಬಲ್ಲಂಥ, ಎಲ್ಲರ ಸಮಸ್ಯೆಗಳನ್ನೂ ಮಾಯಮಾಡಿಬಿಡುವಂಥ ಮಂತ್ರದಂಡವೇ ಭಾರತೀಯತೆ' ಎಂಬಂಥ ಅಹಂಕಾರವೂ ಭಾರತೀಯತೆಗೆ ಇರದು. ಆನಂದ ಕುಮಾರಸ್ವಾಮಿಯವರ ಮಾತುಗಳೇ ಇಲ್ಲಿಯೂ ಸಲ್ಲುತ್ತವೆ—

"Every race must solve its own problems, and those of its own day. I do not suggest that the ancient Indian solutions of the special Indian problems, though its lessons may be many and valuable, can be directly applied to the modern conditions. What I do suggest is that the Hindus grasped more firmly than others the fundamental meaning and purpose of life, and more deliberately than others organized society with a view to the attainment of the fruit of life; and this organization was desiged, not for the advantage of a single class, but, to use a modern formula, to take from each according to his capacity, and to give each according to

his needs..... We must not judge of Indian society, especially Indian society in its present moment of decay, as if it actually realised the Brāhmanical social ideas; yet even with all its imperfections Hindu society as it survives will appear to many to be superior to any form of social organization attained on a large scale anywhere else, and infinitely superior to the social order which we known as "modern civilizations." But even if it were impossible to maintain this view—and a majority of Europeans and of English-educated Indians certaily believe to the contrary—what nevertheless remains as the most conspicuous special character of the Indian culture, and its greatest significance for the modern world, is the evidence of a constant effort to understand the meaning and the ultimate purpose of life, and a purposive organization of society in harmony with that order, and with a view to the attainment of the purpose.

—*Dance of Shiva*

ನಮ್ಮ ಜೀವನದ ಸಾರ್ಥಕತೆಗೆ ಅತ್ಯಂತ ಆವಶ್ಯಕವಾಗಿರುವ ಭಾರತೀಯ ಚಿತ್ತ-ಮಾನಸಿಕತೆ ಮತ್ತು ಕಾಲವನ್ನು—ಎಂದರೆ, ಭಾರತೀಯಪ್ರಜ್ಞೆಯನ್ನು ನಮಗೆ ಹತ್ತಿರವಾಗಿಸುವ, ಭಾರತೀಯತೆಯನ್ನು—ಎಂದರೆ ನಮ್ಮತನವನ್ನು, ನಮ್ಮ ಸ್ವ-ಭಾವವನ್ನು ನಮಗೇ ಸಾಕ್ಷಾತ್ಕರಿಸಿಕೊಡುವ ಸಾರಸ್ವತಯಜ್ಞವೇ 'ಭಾರತತೀರ್ಥ'.

'ತೀರ್ಥ' ಎಂದ ಕೂಡಲೇ ನಮಗೆ ಮೊದಲಿಗೆ ಸ್ಫುರಿಸುವ ಕಲ್ಪನೆಯೆಂದರೆ 'ಪುಣ್ಯಕ್ಷೇತ್ರ', 'ಯಾತ್ರಾಸ್ಥಳ'. ಸಾಮಾನ್ಯವಾದ ಪ್ರಯಾಣಕ್ಕೂ, ಯಾತ್ರಾಸ್ಥಳ ಸಂದರ್ಶನಕ್ಕೂ ವ್ಯತ್ಯಾಸವಿದೆ; ತೀರ್ಥಕ್ಷೇತ್ರಕ್ಕೆ ಹೋಗಿ-ಬರುವುದರಿಂದ ನಮ್ಮ ಶರೀರ-ಮನಸ್ಸು-ಬುದ್ಧಿಗಳಿಗೆ ಏಕಕಾಲಕ್ಕೆ ಶುದ್ಧಿಯೂ ದೊರಕುತ್ತದೆ, ಬಲವೂ ದೊರಕುತ್ತದೆ. ನಮ್ಮ ಹುಟ್ಟನ್ನೇ ಒಂದು ಪ್ರಯಾಣವಾಗಿ ಕಂಡು, ಭಾರತವೇ ಒಂದು ತೀರ್ಥಕ್ಷೇತ್ರ—ಎಂದು ನಮ್ಮಲ್ಲಿ ಮೂಡುವ ಭಾವಸಮೃದ್ಧಿಯೇ 'ಭಾರತತೀರ್ಥ'ಕ್ಕೆ ಪೀಠಿಕೆಯೆನ್ನಬಹುದು. 'ಭಾರತದಲ್ಲಿ ಜನಿಸಿದವರೇ ಧನ್ಯರು' ಎಂದು ಸ್ವತಃ ದೇವತೆಗಳೇ ಹಾಡುತ್ತಾರೆ—ಎಂದು ವಿಷ್ಣುಪುರಾಣವೇ ಒಕ್ಕಣಿಸುವುದು.

'ತೀರ್ಥ' ಎಂಬುದಕ್ಕೆ ಶಾಸ್ತ್ರ ಎಂದೂ ಹೆಸರಿದೆ. ಯಾವುದು ಶಾಸನ ಮಾಡುವುದೋ, ಜೀವಕ್ಕೆ ತ್ರಾಣವನ್ನು ಕೊಡುವುದೋ, ಪ್ರವೃತ್ತಿ-ನಿವೃತ್ತಿ ಮಾರ್ಗಗಳನ್ನೂ, ನಿತ್ಯಾನಿತ್ಯವಸ್ತುವಿವೇಕವನ್ನೂ ಉಪದೇಶಿಸುತ್ತದೆಯೋ ಅಂಥದ್ದು

ಶಾಸ್ತ್ರ ಎಂದೆನಿಸಿಕೊಳ್ಳುವುದು. ಈ ನೆಲೆಯಿಂದ ಭಾರತವೇ ನಮ್ಮ ಪಾಲಿಗೆ ಒಂದು ಶಾಸ್ತ್ರವಾಗಿ ಒದಗಿಬರುವಂಥದು ಎಂಬುದು 'ಭಾರತತೀರ್ಥ'ದ ಆಶಯ.

'ಯಜ್ಞ', 'ಯಾಗ'—ಎಂಬ ಅರ್ಥವೂ 'ತೀರ್ಥ'ಕ್ಕಿದೆ. 'ಯಜ್ಞೋ ವೈ ವಿಷ್ಣುಃ' *(ತೈತ್ತಿರೀಯಸಂಹಿತಾ 1.7.4)* 'ಯಜ್ಞವೆಂದರೆ ವಿಷ್ಣುವೇ'; 'ಸರ್ವಗತಂ ಬ್ರಹ್ಮ ನಿತ್ಯಂ ಯಜ್ಞೇ ಪ್ರತಿಷ್ಠಿತಮ್' *(ಭಗವದ್ಗೀತಾ 3.15)*—ಮುಂತಾದ ವಾಕ್ಯಗಳಿಂದ ಭಾರತೀಯ ಪರಂಪರೆಯಲ್ಲಿರುವ ಯಜ್ಞಪಾರಮ್ಯವನ್ನು ಕಾಣಬಹುದು. ಯಜ್ಞತತ್ತ್ವವು ಪ್ರಧಾನವಾಗಿ ದ್ವಿಮುಖತತ್ತ್ವವನ್ನು ಎತ್ತಿಹಿಡಿಯುತ್ತದೆ; ಇದು ಬಹಿರ್ಮುಖದಲ್ಲಿ ದಾನಶೀಲತೆಯೆಂಬ ಬೆಳಕಾಗಿಯೂ, ಅಂತರ್ಮುಖದಲ್ಲಿ ತಪಸ್ಸೆಂಬ ಕಾವಾಗಿಯೂ ಪ್ರವೃತ್ತಿ-ನಿವೃತ್ತಿಮಾರ್ಗಗಳೆರಡಕ್ಕೂ ಸಾಧನವಾಗಿದೆ. ಯಜ್ಞವೆಂದರೆ ವಿತರಣಶೀಲತೆಯೇ ಹೌದು—'ಯಜ್ಞಶಿಷ್ಟಾಶಿನಃ ಸನ್ತೋ ಮುಚ್ಯನ್ತೇ ಸರ್ವಕಿಲ್ಬಿಷೈಃ' *(ಭಗವದ್ಗೀತಾ 3.13)* 'ಯಜ್ಞದಲ್ಲಿ ಉಳಿದುದನ್ನು ತಿನ್ನುವವರು ಎಲ್ಲ ಪಾಪಗಳಿಂದಲೂ ಮುಕ್ತರಾಗುವರು'; 'ಯಜ್ಞಂ ತಪಃ' *(ತೈತ್ತಿರೀಯ ಆರಣ್ಯಕ)*, 'ಯಜ್ಞವೆಂದರೆ ತಪಸ್ಸು'—ಮುಂತಾದ ವಾಕ್ಯಗಳನ್ನೂ ನೋಡತಕ್ಕದ್ದು. ಯಜ್ಞಕಲಾಪದಲ್ಲಿ ಹವಿಸ್ಸನ್ನು 'ನ ಮಮ'—ನನ್ನದಲ್ಲ—ಎಂದು ಆ ಪರತತ್ತ್ವಕ್ಕೆ ಸಮರ್ಪಣಭಾವದಿಂದ ಸಲ್ಲಿಸುವ ವಿಧಿಯ ಹಿನ್ನೆಲೆಯಲ್ಲಿರುವ ಅಹಂಕಾರ-ಮಮಕಾರಗಳ ದಮನೋದ್ಯಮವನ್ನೂ ನಾವಿಲ್ಲಿ ಮನನ ಮಾಡತಕ್ಕದ್ದು. ಹೀಗೆ ಯಜ್ಞವಿಧಿಯು ದಾನ, ತಪಸ್ಸು, ಶ್ರದ್ಧೆ, ಭಕ್ತಿ, ಕರ್ಮ, ಉಪಾಸನೆ, ಸಹಬಾಳ್ವೆ, ಸಾಮಾಜಿಕಬದ್ಧತೆ, ತ್ಯಾಗಶೀಲತೆ, ಕೃತಜ್ಞತೆ ಮತ್ತು ಜ್ಞಾನಗಳ ಒಕ್ಕೂಟವಾಗಿ ಆತ್ಮೋನ್ನತಿಯನ್ನೂ ಲೋಕಕಲ್ಯಾಣವನ್ನೂ ಸಂಕೇತಿಸುತ್ತದೆ. ಹಲವು ಸ್ತರದ ಅರ್ಥಪರಂಪರೆಯನ್ನು ಹೊಂದಿರುವ ಯಜ್ಞಕಲ್ಪನೆಯಲ್ಲಿ ಒಂದೆನಿಸಿರುವ ಜ್ಞಾನಯಜ್ಞದ ಅದ್ಭುತ ವಿವರಣೆಯನ್ನು ನಿದರ್ಶನಕ್ಕೆ ಇಲ್ಲಿ ನೋಡತಕ್ಕದ್ದು—

"ತಸ್ಯೈವಂ ವಿದುಷೋ ಯಜ್ಞಸ್ಯಾತ್ಮಾ ಯಜಮಾನಃ ಶ್ರದ್ಧಾಃ ಪತ್ನೀ ಶರೀರಮಿಧ್ಮಂ... ಹೃದಯಂ ಯೂಪಃ... ಯದಶ್ನಾತಿ ತದ್ಧವಿರ್ಯತ್ಪಿಬತಿ ತದಸ್ಯ ಸೋಮಪಾನಂ ಯದ್ರಮತೇ ತದುಪಸದೋ ಯತ್ಸಂಚರತ್ಯುಪವಿಶತ್ಯುತ್ತಿಷ್ಠತೇ ಚ ಸ ಪ್ರವರ್ಗ್ಯೋ... ಯನ್ಮರಣಂ ತದವಭೃಥಃ ... ಏತದ್ವೈ ಜರಾಮರ್ಯಮಗ್ನಿ ಹೋತ್ರಂ ಸತ್ರಂ ॥"

—*ಮಹಾನಾರಾಯಣೋಪನಿಷತ್ತು*

*[ವಿದ್ವಾಂಸನಾದವನು ಮಾಡುವ ಯಜ್ಞಕ್ಕೆ ಅವನ ಅಂತರಾತ್ಮವೇ ಯಜಮಾನ (ಕರ್ತ); ಅವನ ಶ್ರದ್ಧೆಯೇ ಯಜಮಾನಿ! ಅವನ ದೇಹವೇ ಸಮಿತ್ತು; ಅವನ ಎದೆಯೇ*

*ಬಲಿಸ್ತಂಭ; ಅವನು ತಿಂದು ಕುಡಿಯುವುದೆಲ್ಲ ಸೋಮರಸ; ಅವನು ಪಡುವ ಎಲ್ಲ ಸುಖಗಳೂ ಉಪಸದವೆಂಬ ಕರ್ಮ; ಅವನು ಕುಳಿತು ಎದ್ದು ಓಡಾಡುವುದೆಲ್ಲವೂ ಪ್ರವರ್ಗ್ಯವೆಂಬ ಕರ್ಮ; ಸಾವು ಅವನ ಅವಭೃಥಸ್ನಾನ; ಇಂತಹುದು ಅವನ ಯಜ್ಞ.*]

*(ಅನುವಾದ: ಡಿವಿಜಿ)*

ಭಾರತೀಯತೆಯೇ ಸಕಲಹಿತಸಾಧಕ-ಭಾವವೈಶಾಲ್ಯದ ದಿಟವಾದ ಯಜ್ಞ —ಎಂಬುದು 'ಭಾರತತೀರ್ಥ'ದ ಕಲ್ಪನೆಯಲ್ಲಿರುವ ಸ್ವಾರಸ್ಯ.

'ತೀರ್ಥ' ಎಂದರೆ ಉಪಾಧ್ಯಾಯ, ಗುರು, ಶಿಕ್ಷಕ, ಆಚಾರ್ಯ—ಎಂದೂ ಅರ್ಥವುಂಟು. ನಮ್ಮನ್ನು ಯಾರು ತಿದ್ದುವರೋ, ಅಜ್ಞಾನದಿಂದ ಜ್ಞಾನದ ಕಡೆಗೆ ಒಯ್ಯುವರೋ, ಬದುಕಿಗೆ ಬೆಳಕಾಗುವರೋ ಅವರು ಗುರುಗಳು. ಭಾರತೀಯ ಪರಂಪರೆಯಲ್ಲಿ ಆಚಾರ್ಯಪದವಿಗೆ ತುಂಬ ಎತ್ತರದ ಸ್ಥಾನವಿದೆ. ಆಚಾರ್ಯರು ಯಾರು? 'ಯಾರು ಕೇವಲ ಪುಸ್ತಕಪಾಂಡಿತ್ಯಮಾತ್ರವಲ್ಲದೆ ಶಾಸ್ತ್ರವಿಷಯವನ್ನು ತಮ್ಮ ನಡೆ-ನುಡಿಗಳಲ್ಲೂ ಅನುಸರಿಸಿ ಆದರ್ಶದ ಮೇಲ್ಪಂಕ್ತಿಯನ್ನು ಹಾಕಿಕೊಡುವರೋ ಅಂಥವರು ಆಚಾರ್ಯರು.' ಹೀಗೆ ಭಾರತವೂ ತಾನು ಅನ್ವಯಿಸಿಕೊಂಡಿರುವ ಋತಬದ್ಧವಾದ ಮಾರ್ಗವನ್ನು ವಿಶ್ವಕ್ಕೇ ಕಲಿಸಬಲ್ಲ ಗುರು —ಎಂಬ ಸ್ವಾರಸ್ಯ ಈ 'ಭಾರತತೀರ್ಥ'ದಲ್ಲಿ ಗರ್ಭಿತವಾಗಿದೆ.

ಸಂನ್ಯಾಸಿಗಳಿಗೆ ತಮ್ಮ ಸಂನ್ಯಾಸನಾಮದೊಂದಿಗೆ ಮತ್ತೊಂದು ಹೆಸರನ್ನೂ ಸೇರಿಸುವ ದಶನಾಮವ್ಯವಸ್ಥೆಯೊಂದು ನಮ್ಮಲ್ಲಿ ರೂಢಿಯಿದೆ; ಈ ನಾಮಸಮೂಹದಲ್ಲಿ 'ತೀರ್ಥ'ವೂ ಸೇರಿರುವುದನ್ನು ಗಮನಿಸತಕ್ಕದ್ದು. ಸಂನ್ಯಾಸವೆಂದರೆ ಅದು ಸ್ವಾತಂತ್ರ್ಯಕ್ಕೂ ಜ್ಞಾನನಿಷ್ಠೆಗೂ ಅಲೌಕಿಕತೆಗೂ ವಿಶ್ವಾತ್ಮಭಾವಕ್ಕೂ ಸಂಕೇತ. ಭಾರತೀಯತೆಯ ಸಹಜಮನೋಧರ್ಮವೇ ಇಂಥ ಸಂನ್ಯಾಸಭಾವ—ಎಂಬ ವಿಶಾಲತಾತ್ಪರ್ಯವೇ 'ಭಾರತತೀರ್ಥ'ದಲ್ಲಿದೆ.

ಜಲ, ಎಂದರೆ ನೀರಿಗೂ 'ತೀರ್ಥ'ವೆನ್ನುತ್ತಾರೆ. ಆದರೆ 'ನೀರು' 'ತೀರ್ಥ'ವಾಗಲು ಅನಿವಾರ್ಯವಾದದ್ದು ನಮ್ಮ ಭಾವಶುದ್ಧಿ; ಲೌಕಿಕವನ್ನು ಅಲೌಕಿಕಕ್ಕೂ, ಸಾಮಾನ್ಯವಾದುದನ್ನು ವಿಶೇಷತೆಗೂ ಏರಿಸುವ ಭಾವೋನ್ನತಿಯ ಮಹಾಪರಿವರ್ತನಶೀಲತೆಯೇ 'ನೀರು' 'ತೀರ್ಥ'ವಾಗುವ ಪ್ರಕ್ರಿಯೆಯಲ್ಲಿದೆ. ಭಾರತೀಯಪ್ರಜ್ಞೆಯನ್ನು ಕೈಹಿಡಿದು ನಡಸುತ್ತಿರುವುದೇ ಈ ಭಾವವಿಸ್ತರಣ. ಸಂಸ್ಕೃತಭಾಷೆಯಲ್ಲಿ ನೀರನ್ನು 'ಜೀವನ' ಎಂದೂ ಹೇಳುತ್ತಾರೆ. ಎಂದರೆ, ಸಾಮಾನ್ಯವಾಗಿರುವ ನಮ್ಮ 'ಜೀವನ'ವನ್ನು ಪವಿತ್ರವಾದ, ಮಂಗಳಕರವಾದ

ರಮಣೀಯವಾದ 'ತೀರ್ಥ'ವನ್ನಾಗಿಸುವ, 'ರಸ'ವನ್ನಾಗಿಸುವ ಶಕ್ತಿ ಭಾರತೀಯತೆಗೆ ಉಂಟೆಂಬ ರಸಸಿದ್ಧಾಂತವೂ 'ಭಾರತತೀರ್ಥ'ದಲ್ಲಿದೆ.

'ಆಪೋ ಹಿ ಷ್ಠಾ ಮಯೋಭುವಸ್ತಾ ನ ಊರ್ಜೇ ದಧಾತನ । ಮಹೇ ರಣಾಯ ಚಕ್ಷಸೇ ॥ ಯೋ ವಃ ಶಿವತಮೋ ರಸಸ್ತಸ್ಯ ಭಾಜಯತೇಹ ನಃ । ಉಶತೀರಿವ ಮಾತರಃ ॥' *(ಅಥರ್ವವೇದ 1.5.1-2)*

ಅಪ್(=ನೀರು) ಎಂದರೆ ಜೀವನವು ಸಹಜವಾಗಿಯೇ ಶಕ್ತಿದಾಯಕವೂ ಶುಭದಾಯಕವೂ ಹೌದು. ಇದರ ಮೂಲಸತ್ತ್ವ, ಎಂದರೆ ಜೀವನದ ಶಿವತಮವಾದ ರಸವು ನಮಗೆ ಎಟುಕಬೇಕಾದರೆ ಸೃಷ್ಟಿ(=ನೀರು) ನಮ್ಮ ಪಾಲಿಗೆ ತಾಯಿಯಾಗಬೇಕು; ಎಂದರೆ, ಹೀಗೆ ಭಾರತಮಾತೆಯೂ ತನ್ನ ವಾತ್ಸಲ್ಯದಿಂದ ನಮ್ಮ ಸಹಜಜೀವನವನ್ನು ರಸಮಯಗೊಳಿಸಬಲ್ಲ ಕಾರಯತ್ರೀಪ್ರತಿಭಾ ಸಂಪನ್ನೆಯೆಂಬುದು ಇಲ್ಲಿಯ ಭಾವ. ಹೀಗೆ, 'ಭಾರತ' ಎಂಬುದು ಕೇವಲ ಒಂದು ದೇಶವಾಚಕವಲ್ಲ, ಇದು ಭಾವವಾಚಕ; ಇದು ಅಲೌಕಿಕತೆಯ ರಸದ ತೀರ್ಥಘಟ್ಟ, ಆನಂದದ ಮಡು—ಎಂಬೆಲ್ಲ ಧ್ವನಿ 'ಭಾರತತೀರ್ಥ'ದಲ್ಲಿದೆ. ಮತ್ತೆ, ಜೀವಿಯ ಜೀವಿಕೆಗೆ ಅತ್ಯಂತ ಆವಶ್ಯಕತೆಗಳಲ್ಲಿ ನೀರು ಕೂಡ ಒಂದು ಎಂಬುದೂ ದಿಟವೇ. ಪ್ರಪಂಚದ ಸಂಸ್ಕೃತಿಗಳ ಉಳಿವೂ-ಅಳಿವೂ ನೀರನ್ನು ಆಶ್ರಯಿಸಿಯೇ ನಡೆದಿವೆ. ಜಗತ್ತಿಗೆ ಭಾರತೀಯತೆಯ ಅಗತ್ಯವನ್ನು ಇದು ಎತ್ತಿತೋರಿಸುತ್ತದೆ.

'ಅಗ್ನಿ', 'ಬೆಂಕಿ' ಎಂಬ ಅರ್ಥವೂ 'ತೀರ್ಥ'ಕ್ಕಿದೆ. ಮನುಕುಲಕ್ಕೆ ಬೆಂಕಿಯ ಆವಶ್ಯಕತೆ ಎಷ್ಟೆಂಬುದನ್ನು ಇಲ್ಲಿ ಪ್ರತ್ಯೇಕವಾಗಿ ವಿಸ್ತರಿಸಬೇಕಿಲ್ಲ. ಮನುಷ್ಯನ ಸಂಸ್ಕೃತಿಗೆ, ನಾಗರಿಕತೆಗೆ ಮೂಲಭೂತವಾಗಿ ಒದಗಿಬಂದದ್ದೇ ಬೆಂಕಿ. ಹಾಗೂ, ಬೆಂಕಿಯು ಪಾವಿತ್ರ್ಯಕ್ಕೂ ನಿಷ್ಪಾಕ್ಷಿಕತೆಗೂ ಪ್ರತೀಕ. ಇನ್ನು, ಅಗ್ನಿಯು ವೈದಿಕಸಂದರ್ಭದಲ್ಲಿ ಮನುಷ್ಯನಿಗೂ ದೇವತೆಗಳಿಗೂ ಸಂಬಂಧವನ್ನು ಏರ್ಪಡಿಸುವ ಪುರೋಹಿತ. ನಾಗರಿಕತೆಗೆ ಭಾರತೀಯತೆಗೂ ಇರುವ ಸಂಬಂಧವನ್ನೂ, ಹಾಗೆಯೇ ನಾವು ದೈವತ್ವಕ್ಕೆ ಎಂದರೆ ಅಲೌಕಿಕತತ್ತ್ವಕ್ಕೆ ಏರಲು ಭಾರತೀಯತೆಯು ನಮಗೆ ಒದಗಿಸಬಲ್ಲ ಸಾಧನವನ್ನೂ 'ಭಾರತತೀರ್ಥ'ವು ಧ್ವನಿಸುತ್ತದೆ. ಅಗ್ನಿಯು ಊರ್ಧ್ವಗತಿಗೂ ಸಂಕೇತ; ಇದು ಜ್ಞಾನವನ್ನೂ ಪ್ರಗತಿಯನ್ನೂ ಧ್ವನಿಸುತ್ತದೆ. ಮತ್ತೆ, ಅಗ್ನಿಯನ್ನು ನಾಯಕ, 'ಅಗ್ರಣಿ' ಎಂದೂ ವ್ಯವಹರಿಸಲಾಗುವುದು. ಜಗತ್ತಿನಲ್ಲಿ ಭಾರತೀಯತೆಗೇ ಅಗ್ರಪಟ್ಟ ಸಲ್ಲಬೇಕಾದುದು ಅಲ್ಲವೆ? ಇನ್ನೂ ಒಂದು ವಿಶೇಷವೆಂದರೆ ಅಗ್ನಿಯು ಪ್ರಾಚೀನಕಾಲದಿಂದಲೂ ಆಧುನಿಕಕಾಲದವರೆಗೆ ಪೂಜಿಸಲ್ಪಡುತ್ತಿರುತ್ತದೆ—'ಅಗ್ನಿಃ ಪೂರ್ವೇಭಿಋರ್ಷಿಭಿರೀಡ್ಯೋ ನೂತನೈರುತ'

*(ಋಗ್ವೇದ)*. ಹೀಗೆ ಭಾರತೀಯತೆಯು ಚಿರಂತನತೆಗೂ, ಪ್ರಾಚೀನ-ನವೀನಗಳ ಸಂಮಿಳನಕ್ಕೂ ಪ್ರತೀಕವಾಗಿದ್ದು, ಇದು ಸರ್ವಮಾನ್ಯತೆಗೂ ಸಾರ್ವಕಾಲಿಕತೆಗೂ ಅರ್ಹವಾಗಿದೆ.

'ತೀರ್ಥ'ಕ್ಕೆ 'ಯೋಗ' ಎಂಬ ಅರ್ಥವೂ ಇದೆ. ಶಾರೀರಕ ಮತ್ತು ಮಾನಸಿಕಸ್ವಾಸ್ಥ್ಯಕ್ಕಾಗಿ ಮಾಡುವ ಕ್ರಿಯೆಯೆಲ್ಲವೂ ಯೋಗವೇ ಎನಿಸುವುದು. ಯೋಗ ಎಂಬುದು ನಾವು ನಡಸುವ ಕರ್ಮಗಳಲ್ಲಿ ನಿರ್ವಹಿಸುವ ಕೌಶಲವೂ ಹೌದು; ಕೌಶಲದಲ್ಲಿ ವ್ಯವಸ್ಥೆಯನ್ನು—ಋತವನ್ನು—ಕಾಪಾಡುವ ಎಚ್ಚರಿಕೆ, ಜಾಣ್ಮೆಗಳೆರಡೂ ಸೇರುತ್ತವೆ. ಮಾತ್ರವಲ್ಲ, ಮಾನಸಿಕ ದೃಢತೆಯ ಶಿಖರಸ್ಥಿತಿಯೇ ಯೋಗ. ಭಾರತೀಯತೆಗೆ ಇರುವ ಇಷ್ಟೆಲ್ಲ ಬಲಗಳ ಅರಿವೇ ಈ 'ಭಾರತತೀರ್ಥ'ದಲ್ಲಿದೆ.

ತೀರ್ಥಗಳನ್ನು ಸಾಮಾನ್ಯವಾಗಿ ಮೂರು ವಿಧವಾಗಿ ಗುರುತಿಸುವುದುಂಟು—(1) ಸ್ಥಾವರತೀರ್ಥ: ಇದು ಪುಣ್ಯಕ್ಷೇತ್ರ, ನದಿ-ಸರೋವರಗಳು ಮುಂತಾದುವು; (2) ಜಂಗಮತೀರ್ಥ: ಎಂದರೆ ಜ್ಞಾನಿಗಳೇ ತೀರ್ಥಸಮಾನರು ಎಂದು; ಮತ್ತು, (3) ಮಾನಸತೀರ್ಥ: ಮನಃಶುದ್ಧಿಯೇ ದಿಟವಾದ ತೀರ್ಥ. ಈ ಎಲ್ಲ ವಿವರಗಳನ್ನೂ ಒಳಗೊಂಡಿರುವುದೇ 'ಭಾರತತೀರ್ಥ'.

ತ್ಯಾಗಜೀವನಕ್ಕೆ ಮೂರ್ತರೂಪವಾಗಿರುವ ಋಷಿ-ಮುನಿಗಳು ಸ್ನಾನಮಾಡಿದ ಜಲಪ್ರದೇಶಗಳು 'ತೀರ್ಥ' ಎಂದೆನಿಸಿಕೊಳ್ಳುತ್ತವೆ. ಈ ತೀರ್ಥಗಳು ಶುಭ್ರತೆಗೆ, ನಿರ್ಮಲತೆಗೆ, ಪಾವಿತ್ರ್ಯಕ್ಕೆ ಸಂಕೇತಗಳು. ಉದಾಹರಣೆಗೆ, ರಾಮಾಯಣದಲ್ಲಿ ಬರುವ ತಮಸಾನದಿಯ ವರ್ಣನೆಯನ್ನು ಇಲ್ಲಿ ಉದಾಹರಿಸಬಹುದು—

ಅಕರ್ದಮಮಿದಂ ತೀರ್ಥಂ ಭರದ್ವಾಜ ನಿಶಾಮಯ ।
ರಮಣೀಯಂ ಪ್ರಸನ್ನಾಂಬು ಸನ್ಮನುಷ್ಯಮನೋಯಥಾ ॥

*—ಬಾಲಕಾಂಡಮ್, 2.5*

*(ಭರದ್ವಾಜ, ಸ್ವಚ್ಛವಾದ ಈ ತೀರ್ಥವನ್ನು ನೋಡು—ತಿಳಿನೀರಿನಿಂದ ತುಂಬಿದ ಇದು ಸಜ್ಜನರ ಮನಸ್ಸಿನಂತೆ ಎಷ್ಟು ರಮಣೀಯವಾಗಿದೆ!)*

ಹೀಗೆ, ಸ್ವಚ್ಛವಾದ ಕನ್ನಡಿಯಂತೆ ನಮ್ಮತನವನ್ನು ಪ್ರತಿಫಲಿಸಬಲ್ಲ ಋಷಿತೀರ್ಥವೇ ಈ 'ಭಾರತತೀರ್ಥ'.

# ಪ್ರವೇಶ

ನಮ್ಮ ದೇಶದಲ್ಲಿ ಗಣಪತಿಯ ಗುಡಿಯಿಲ್ಲದ ಗ್ರಾಮವಿಲ್ಲ; ಗಣೇಶನ ಮೂರ್ತಿಯಿರದ ಮನೆಯಿಲ್ಲ. ಯಾವ ಕೆಲಸವನ್ನು ಕೈಗೊಳ್ಳುವ ಮೊದಲೂ ಗಣಪತಿಯನ್ನು ನೆನೆಯುತ್ತೇವೆ; ಬಯಕೆಗಳು ತೀರಬೇಕೆಂದು ಗಜಮುಖನನ್ನು ಬೇಡಿಕೊಳ್ಳುತ್ತೇವೆ. ವ್ರತಗಳನ್ನು ಮಾಡುವಾಗ, ಮದುವೆ ಮುಂಜಿ ಮೊದಲಾದ ಸಂಸ್ಕಾರಗಳನ್ನು ನಡೆಸುವಾಗ, ಪರೀಕ್ಷೆಗೆ ಕೂಡುವಾಗ, ಮಗುವಿಗೆ ಅಕ್ಷರಾಭ್ಯಾಸ ಮಾಡಿಸುವಾಗ, ಪ್ರಯಾಣ ಹೊರಡುವಾಗ ತಪ್ಪದೆ ಗಣಪತಿಯನ್ನು ಪೂಜಿಸುತ್ತೇವೆ. ಎಲ್ಲ ಜಾತಿಯವರೂ, ಎಲ್ಲ ಸಂಪ್ರದಾಯಗಳವರೂ ಗಣಪತಿಯ ಪೂಜೆಯಲ್ಲಿ ಭಾಗಿಗಳಾಗುತ್ತಾರೆ. ಗಣಪತಿಯಷ್ಟು ಜನಪ್ರಿಯನಾದ ದೇವತೆ ಮತ್ತೊಬ್ಬನಿಲ್ಲವೆಂದರೆ ಉತ್ಪ್ರೇಕ್ಷೆಯಲ್ಲ.

ಗಣಪತಿಯ ಪ್ರತಾಪ ನಮ್ಮ ದೇಶಕ್ಕೆ ಮಾತ್ರ ಸೀಮಿತವಾದುದಲ್ಲ. ನೇಪಾಳ, ಚೀಣೀ-ತುರ್ಕಿಸ್ಥಾನ, ಟಿಬೆಟ್, ಬರ್ಮಾ, ಸಯಾಂ, ಇಂಡೋಚೀಣ, ಜಾವಾ, ಸುಮಾತ್ರಾ, ಬಾಲಿ, ಬೋರ್ನಿಯೋ, ಚೀಣ, ಜಪಾನ್—ಈ ದೇಶಗಳಲ್ಲಿಯೂ ಗಣಪತಿಯ ಪೂಜೆ ಪ್ರಸಕ್ತವಾಗಿದ್ದಿತು; ಇಲ್ಲೆಲ್ಲ ಗಣಪತಿಯ ಮೂರ್ತಿಗಳು ಪ್ರಸಿದ್ಧವಾಗಿವೆ. ಈ ಬೇರೆ ಬೇರೆ ದೇಶಗಳಲ್ಲಿ ಗಣಪತಿಯ ವಿಚಾರವಾಗಿ ಒಂದೇ ತೆರನಾದ ಕಲ್ಪನೆಯಿದ್ದಿತೆನ್ನಲಾಗದು; ಆದರೆ ಆ ಮೂರ್ತಿಯ ಹಿರಿಮೆಯನ್ನು ಇಲ್ಲೆಲ್ಲ ಅಂಗೀಕರಿಸಿದ್ದರು.

ಗಣಪತಿಯ ಪೂಜೆ ಎಷ್ಟು ಪ್ರಾಚೀನವಾದುದು? ಈ ಸಮಸ್ಯೆಗೆ ಸಮರ್ಪಕವಾದ ಪರಿಹಾರ ದೊರೆಯುವುದಿಲ್ಲ. ವೈದಿಕಯುಗದಲ್ಲಿಯೇ, ಎಂದರೆ ಸುಮಾರು ಎಂಟು ಸಾವಿರ ವರ್ಷಗಳ ಹಿಂದೆ, ಗಣಪತಿಯ

ಕಲ್ಪನೆಯನ್ನು ಕಾಣುವವರಿದ್ದಾರೆ. ಗಣಪತಿಯೆಂಬ ಹೆಸರಂತೂ ವೈದಿಕವಾಙ್ಮಯದಲ್ಲಿ ಸಿಗುತ್ತದೆ. ಈ ಯುಗಕ್ಕೂ ಮುಂಚೆ ಬಳಕೆಯಲ್ಲಿ ಇದ್ದಿರಬಹುದಾದ ದ್ರಾವಿಡಸಂಸ್ಕೃತಿಯ ದೇವತೆಯೇ ಈ ಗಣಪತಿಯೆಂದೂ, ಇದನ್ನೇ ಆರ್ಯರು ಅಳವಡಿಸಿಕೊಂಡರು ಎಂದೂ ವಾದಿಸುವವರಿದ್ದಾರೆ. ಎಂದರೆ, ನಮಗೆ ಪರಿಚಿತರಾಗಿರುವ ಎಲ್ಲ ದೇವತೆಗಳಿಗೂ ಹಿಂದಿನವನು ಗಣಪತಿ.

ಇದು ವಿವಾದದ ವಿಚಾರ, ಹೋಗಲಿ; ಏನಿಲ್ಲವೆಂದರೂ ಸುಮಾರು ಎರಡು ಸಾವಿರ ವರ್ಷಗಳಷ್ಟು ಕಾಲವಾದರೂ ಗಣಪತಿಗೆ ಪೂಜೆ ಸಂದಿದೆ. ಈಗಿರುವ ಗಣಪತಿಯ ಆಕಾರವೇ ಎಲ್ಲ ಕಾಲದಲ್ಲಿಯೂ ಇದ್ದಿತೆಂದಲ್ಲ. ಈಗಿರುವ ಆಕಾರವು ಕ್ರಿಸ್ತಾಬ್ದ ಐದಾರನೆಯ ಶತಮಾನಗಳಲ್ಲಿ ಸಿದ್ಧವಾಯಿತೆಂದು ಹೇಳುತ್ತಾರೆ. ಶಿಲ್ಪಶಾಸ್ತ್ರದಲ್ಲಿ ಅನುಭವವಿರುವವರು ಭೂಮಾರದ ಶಕ್ತಿಗಣಪತಿ, ಮಥುರಾದ ಸ್ಥಾನಕಗಣಪತಿ ಮೊದಲಾದ ಪ್ರಾಚೀನ ಶಿಲ್ಪಗಳು ಈ ಕಾಲದವೆಂದು ನಿರ್ಧರಿಸಿದ್ದಾರೆ. ಅಲ್ಲಿಂದ ಮುಂದೆ ಗಜಮುಖ, ಪುರುಷದೇಹ ಮೊದಲಾದ ವಿವರಗಳು ಸ್ಪಷ್ಟವಾಗಿವೆ. ಎಂದರೆ, ನಮ್ಮ ಕಲ್ಪನೆಯ ಗಣಪತಿಯೇ ಸಾವಿರ ವರ್ಷಗಳನ್ನೂ ಮೀರಿ ನಿಂತಿದ್ದಾನೆಂದು ಅರ್ಥವಷ್ಟೆ?

ಕ್ರಿಸ್ತಾಬ್ದದ ಮೊದಲ ಶತಕಗಳಲ್ಲಿ ಗಣಪತಿಯ ರೂಪವು ಹೇಗಿದ್ದಿತೋ ತಿಳಿದುಬರುವುದಿಲ್ಲ. ಆದರೆ ಗಣಪತಿಯು ಆಗಲೇ ಪ್ರಮುಖದೇವತೆ ಯಾಗಿದ್ದುದು ನಿಜ. ಕ್ರಿಸ್ತಾಬ್ದದ ಮೊದಲನೆಯ ಶತಮಾನದಲ್ಲಿ ಸಿದ್ಧವಾದ ಹಾಲನ 'ಗಾಥಾಸಪ್ತಶತಿ'ಯು ಗಣಾಧಿಪತಿ(ಗಣಾಹಿವಣ)ಯನ್ನು ಸ್ತುತಿಸಿದೆ. ಇದೇ ಕಾಲದಲ್ಲಿ ಸಿದ್ಧವಾದ ವರಾಹಪುರಾಣ, ವಾಮನಪುರಾಣ, ಬ್ರಹ್ಮವೈವರ್ತಪುರಾಣ ಇವುಗಳಲ್ಲಿ ಗಣಪತಿಯ ಉಲ್ಲೇಖ ವಿಸ್ತಾರವಾಗಿ ಬರುತ್ತದೆ. ಕ್ರಿಸ್ತಾಬ್ದ 862ರಲ್ಲಿ ಮೂಡಿಬಂದ ಜೋಧಪುರ-ಘಟಿಯಾಲಾ ಸ್ತಂಭಶಾಸನದಲ್ಲಿ ಗಣೇಶನ ಸ್ತೋತ್ರವಿದೆ. ಈ ಸ್ತಂಭದ ಮೇಲ್ಭಾಗದಲ್ಲಿ ಬೆನ್ನಿಗೆ ಬೆನ್ನು ಹಚ್ಚಿ ನಾಲ್ಕೂ ಕಡೆ ಮುಖಮಾಡಿ, ಕುಳಿತ ನಾಲ್ವರು ಗಣಪತಿಮೂರ್ತಿಗಳಿವೆ. ಎಂಟು-ಒಂಬತ್ತನೆಯ ಶತಮಾನಗಳಲ್ಲಿಯೇ ನೇಪಾಳದಲ್ಲಿಯೂ ಟಿಬೆಟ್ಟಿನಲ್ಲಿಯೂ ಗಣೇಶನ ಆರಾಧನೆಯು

ಪ್ರಚಲಿತವಾಗಿದ್ದಂತೆ ತಿಳಿದುಬರುತ್ತದೆ. ಶಂಕರಾಚಾರ್ಯರ ಕಾಲದಲ್ಲಿ, ಎಂದರೆ ಆರನೆಯ ಶತಮಾನದ ಉತ್ತರಾರ್ಧದಲ್ಲಿ, ನಮ್ಮ ದೇಶದಲ್ಲಿ ಗಾಣಪತ್ಯರ ಪಂಥವು ಪ್ರಬಲವಾಗಿದ್ದಿತು. ಆಚಾರ್ಯರು ವ್ಯವಸ್ಥೆಮಾಡಿದ ಪಂಚಾಯತನಪೂಜೆಯಲ್ಲಿ ಗಣೇಶನಿಗೆ ಸ್ಥಾನ ಒದಗಿದುದು ಇದೇ ಕಾರಣದಿಂದಲೇ. ಈಗಲೂ ನಮ್ಮ ದೇಶದಲ್ಲಿ ಬಹುಮಟ್ಟಿಗೆ ಪೂಜೆಗೊಳ್ಳುತ್ತಿರುವ ದೇವತೆಗಳು ಈ ಪಂಚಾಯತನಕ್ಕೆ ಸೇರಿದವರೇ— ವಿಷ್ಣು, ಶಿವ, ಶಕ್ತಿ (ದುರ್ಗೆ, ದೇವಿ), ಗಣೇಶ, ಸೂರ್ಯ. ತಾಂತ್ರಿಕ ಸಂಪ್ರದಾಯವು ಗಣೇಶನನ್ನು ಆರಗಿಸಿಕೊಂಡು ಅವನಿಗೆ ಬೀಜಮಂತ್ರ, ಷಡಂಗನ್ಯಾಸ, ಕಲ್ಪಗಳನ್ನು ಸಿದ್ಧಮಾಡಿದ ಕಾಲವೂ ಆರೇಳನೆಯ ಶತಮಾನವೇ ಎನ್ನಬಹುದು.

ಜನಗಳ ಕಲ್ಪನೆಯಲ್ಲಿ ಗಣಪತಿಯು ಬೆಳೆದು ಬಂದ ದಾರಿ ಸ್ಪಷ್ಟವಾಗಿಲ್ಲ. ಸಾಹಿತ್ಯಖಂಡಗಳಲ್ಲಿ, ಪುರಾಣಗಳಲ್ಲಿ, ಶಿಲ್ಪದಲ್ಲಿ, ತಾಂತ್ರಿಕ ಪ್ರಕ್ರಿಯೆಗಳಲ್ಲಿ, ಪೂಜಾಕಲ್ಪಗಳಲ್ಲಿ ಗಣಪತಿಯ ಸ್ವರೂಪ, ಸ್ವಭಾವಗಳ ವಿಚಾರವಾಗಿ ಹಲವಾರು ವಿವರಗಳು ದೊರೆಯುವುವಾದರೂ ಕಾಲದ ದೃಷ್ಟಿಯಿಂದ ಕಲ್ಪನೆಯ ವಿಕಾಸ ಹೀಗೆಯೇ ಆಯಿತು ಎಂದು ನಿರ್ಧರಿಸುವುದು ಕಷ್ಟ. ದೊರೆಯುವ ವಿವರಗಳು ಸ್ವಾರಸ್ಯವಾಗಿವೆ, ಗಂಭೀರವಾಗಿವೆ, ಸಂಕೇತ ಪ್ರಮುಖವಾಗಿವೆ. ವಿಕಾಸದ ವಿಚಾರದಲ್ಲಿ ಹಟವಿಲ್ಲದೆ, ಉಪಲಬ್ಧವಿರುವ ವಿವರಗಳನ್ನು ನಿರೂಪಿಸುವ, ಸಾಧ್ಯವಾದ ಮಟ್ಟಿಗೆ ವಿವರಿಸುವ, ಯತ್ನಮಾಡಿದ್ದೇನಷ್ಟೆ.

ಗಣಪತಿಯ ಕಲ್ಪನೆಯನ್ನು ವಿಶ್ಲೇಷಣಾತ್ಮಕವಾಗಿ ಅಧ್ಯಯನ ಮಾಡಲು ಮೊದಲು ಮಾಡಿದವರು ಪಾಶ್ಚಾತ್ಯಪಂಡಿತರು. 1845ರಷ್ಟು ಹಿಂದೆಯೇ ಸ್ಟಿವನ್‌ಸನ್ ಎಂಬ ವಿದ್ವಾಂಸರು ಗಣೇಶಪುರಾಣದ ವಿವೇಚನೆಯನ್ನು ಕೈಗೊಂಡು ಪ್ರೌಢವಾದ ಪ್ರಬಂಧವೊಂದನ್ನು ಸಿದ್ಧಪಡಿಸಿದರು *(JRAS, VOL. VIII)*. 1898ರಲ್ಲಿ ವಿನ್‌ಟರ್‌ನಿಟ್ಸ್ "ಮಹಾಭಾರತದಲ್ಲಿ ಗಣೇಶ" ಎಂಬ ಪ್ರಬಂಧವನ್ನು ಬರೆದರು (JRAS). ಈ ಕಾಲದಿಂದ ಗಣೇಶನ ವಿಚಾರವಾಗಿ ಪಂಡಿತರು ಆಸಕ್ತರಾಗಿದ್ದಾರೆ.

ಆದರೂ ಸಿದ್ಧಾಂತಪ್ರಾಯವಾದ ಯಾವ ಪ್ರಕಾಶನವೂ ಆಗಿಲ್ಲ. 1928ರಲ್ಲಿ ಆನಂದ ಕುಮಾರಸ್ವಾಮಿಗಳು ಬರೆದ ಪ್ರಕರಣವೇ ಇದ್ದುದರಲ್ಲಿ ಪ್ರಗಲ್ಭವಾದುದು ಎನ್ನಬಹುದು *(Bulletin of the Boston Museum of Fine Arts, Vol xxvi, April 1928).* ಆ್ಯಲಿಸ್ ಘೆಟ್ಟಿ ಎಂಬಾಕೆ 1936ರಲ್ಲಿ ಗಣೇಶನ ಮೇಲೆ ಸುವಿಸ್ತಾರವಾದ ಗ್ರಂಥವೊಂದನ್ನು ಸಿದ್ಧಮಾಡಿದರು. ಇದರಲ್ಲಿ ನೂರಾರು ವಿವರಗಳ ಸಂಗ್ರಹವಿದೆ; ಸ್ವಾರಸ್ಯವಾದ ಶಿಲ್ಪಕೃತಿಗಳನ್ನೂ ಚಿತ್ರಗಳನ್ನೂ ಸೇರಿಸಿರುವುದೊಂದು ಇದರ ವೈಶಿಷ್ಟ್ಯ. ಪ್ರಸ್ತುತಗ್ರಂಥದ ಕಡೆಯಲ್ಲಿ ಕಾಣಿಸಿರುವ ಚಿತ್ರಗಳಲ್ಲಿ ಹಲವಾರಕ್ಕೆ ಇದೇ ಆಕರ *(Ganesa,* Oxford Clarendon Press*).* ಬಹುಮಟ್ಟಿಗೆ, ಭಾರತದಾಚೆ ಬೆಳೆದು ಬಂದಿರುವ ಗಣಪತಿಯ ಕಲ್ಪನೆಯೇ ಈ ಗ್ರಂಥದ ಮುಖ್ಯವಸ್ತು. ಆದರೆ ಇದು ಪ್ರೌಢವಾದ ವಿವೇಚನೆಯಲ್ಲ. ಅರ್ಥನಿಷ್ಪತ್ತಿಯು ನಿರ್ದುಷ್ಟವಾಗದೆ ವಿವರಗಳ ಸಂಕಲನದಲ್ಲಿ ಸಾರ್ಥಕ್ಯವಿರದಷ್ಟೆ. ಈಚೆಗೆ ನಮ್ಮ ದೇಶದ ನಾಯಕರಲ್ಲಿ ಹಿರಿಯರಾದ ಡಾ. ಸಂಪೂರ್ಣಾನಂದರು ಹಿಂದಿಯಲ್ಲಿ ಗಣೇಶನ ಬಗ್ಗೆ ಉತ್ತಮವಾದ ಸಣ್ಣ ಹೊತ್ತಿಗೆಯೊಂದನ್ನು ಹೊರತಂದಿದ್ದಾರೆ. ತಂತ್ರ ಮತ್ತು ಯೋಗದಲ್ಲಿ ಗಣಪತಿಯ ಸ್ಥಾನವು ಇಲ್ಲಿ ಪ್ರಸ್ತಾಪಕ್ಕೆ ಬಂದಿದೆ.

ಇಷ್ಟಾದರೂ ಗಣಪತಿಯ ಕಲ್ಪನೆಯ ಉಗಮವಾಗಲೀ ಪ್ರಕಾರಗಳಾಗಲೀ ಸ್ಪಷ್ಟವಾಗಿಲ್ಲ; ಇದು ಹೀಗೆಯೇ ಎನ್ನುವ ಹಾಗಿಲ್ಲ. ಸ್ವಾರಸ್ಯವಾಗಿರುವ ವಿವರಗಳನ್ನು ಇಲ್ಲಿ ಕಾಣಿಸಿದ್ದೇನೆ. ಬುದ್ಧಿಗೆ ತಿಳಿದಷ್ಟು ವಿವರಿಸಲು ಪ್ರಯತ್ನಪಟ್ಟಿದ್ದೇನೆ. ಪೂರ್ವಸೂರಿಗಳಿಂದ ಉಪಕೃತನಾಗಿದ್ದರೂ ಅವರ ಜಾಡನ್ನೇ ಹಿಡಿಯುವ ಮನಸ್ಸು ಮಾಡಿಲ್ಲ; ಸ್ವತಂತ್ರವಿಮರ್ಶೆಯ ಸಾಹಸವನ್ನು ಸಹೃದಯರು ಮನ್ನಿಸಬೇಕು.

# ವೈದಿಕ-ಗಣಪತಿ

ನಮ್ಮ ದೇಶದಲ್ಲಿ ಪ್ರಚಲಿತವಾಗಿರುವ ಎಲ್ಲ ಪದ್ಧತಿಗಳಿಗೂ ಮೂಲವನ್ನು ಋಗ್ವೇದದಲ್ಲಿ ಹುಡುಕುವುದು ವಾಡಿಕೆ; [ನಮ್ಮ ಇಂದಿನ ಗಣಪತಿಯ ಕಲ್ಪನೆಯನ್ನು ಸ್ಪಷ್ಟವಾಗಿ] ಕಾಣುವುದು ಕಷ್ಟವಾದರೂ ಇಲ್ಲಿ ಮನೋಧರ್ಮ ಸ್ಪಷ್ಟವಾಗುತ್ತದೆ. ವೈದಿಕಋಷಿಗಳು ಗಣಪತಿಯನ್ನು ಪೂಜಿಸುತ್ತಿದ್ದರೆ? ವೈದಿಕದೇವತೆಗಳ ಗೋಷ್ಠಿ ದೊಡ್ಡದು; ಆದರೂ ಗಜಮುಖನಾದ, ಪ್ರಲಂಬಜಠರನಾದ, ರುದ್ರಪುತ್ರನಾದ ಗಣಪತಿಯು ಇದರಲ್ಲಿ ಸೇರಿಲ್ಲ. ರುದ್ರನೇನೋ ದೇವತೆಯೇ; ಆದರೆ ಅವನ ಸಂಸಾರದ ಚಿತ್ರ ಅಸ್ಪಷ್ಟವಾಗಿದೆ. ಗಣಗಳಿಗೆ ಒಡೆಯನೆಂಬ ಅರ್ಥದಲ್ಲಿ ಗಣಪತಿಯ ಉಲ್ಲೇಖವೂ ಬರುತ್ತದೆ. ಋಗ್ವೇದದ ಎರಡನೆಯ ಮಂಡಲದಲ್ಲಿ ಈ ಶ್ಲೋಕವನ್ನು ಕಾಣಬಹುದು—

> ಗಣಾನಾಂ ತ್ವಾ ಗಣಪತಿಂ ಹವಾಮಹೇ
> ಕವಿಂ ಕವೀನಾಂ ಉಪಮಶ್ರವಸ್ತಮಮ್ ।
> ಜ್ಯೇಷ್ಠರಾಜಂ ಬ್ರಹ್ಮಣಾಂ ಬ್ರಹ್ಮಣಸ್ಪತ
> ಆ ನಃ ಶೃಣ್ವನ್ನೂತಿಭಿಸ್ಸೀದ ಸಾದನಮ್ ॥

ಇಲ್ಲಿ ಗಣಪತಿಯೆಂದರೆ ನಮ್ಮ ಇಂದಿನ ಕಲ್ಪನೆಯ ಗಣಪತಿಯಲ್ಲ. ಭಾಷ್ಯಕಾರರಾದ ಸಾಯಣಾಚಾರ್ಯರ ಪ್ರಕಾರ ಗಣಪತಿಯು ಬ್ರಹ್ಮಣಸ್ಪತಿ. ಬ್ರಹ್ಮವೆಂದರೆ ಮಂತ್ರ; ಮಂತ್ರಗಳಿಗೆ ಒಡೆಯನಾದವನು ಬ್ರಹ್ಮಣಸ್ಪತಿ. ಈ ವೈದಿಕಮಂತ್ರವು ಬ್ರಹ್ಮಣಸ್ಪತಿ ಅಥವಾ ಬೃಹಸ್ಪತಿಯನ್ನು ಕುರಿತದ್ದು.

ಗಣಪತಿಯ ಕಲ್ಪನೆಯ ಬೆಳವಣಿಗೆಯನ್ನು ಅರ್ಥಮಾಡಿಕೊಳ್ಳಲು ಈ ಮಂತ್ರವು ನೆರವು ನೀಡುತ್ತದೆಯೆ? ಇಲ್ಲಿ ಹೇಳಿರುವ ಗಣಪತಿಗೂ ನಮ್ಮ

ಗಣಪತಿಗೂ ಸಂಬಂಧವೇನೋ ಇಲ್ಲ. ಗಣಪತಿಯೆನ್ನುವ ಮಾತಿನ ವ್ಯವಹಾರವೇ ಮುಖ್ಯವಲ್ಲ. ಆದರೆ ಗಣಗಳಿಗೆ ಒಡೆಯನೊಬ್ಬನಿರುವ ಕಲ್ಪನೆಯು ವೈದಿಕವಾಙ್ಮಯದಲ್ಲಿ ಕಾಣುವುದು ಸ್ವಾರಸ್ಯವಾದ ವಿವರ. ಈ ಪ್ರಾಚೀನಕಲ್ಪನೆಯ ಬೀಜವೇ ಮುಂದೆ ಹೆಮ್ಮರನಾಗಿ ಬೆಳೆಯಿತೆನ್ನಬಹುದು. ಋಗ್ವೇದದ ಹತ್ತನೆಯ ಮಂಡಲದಲ್ಲಿಯೂ ಗಣಪತಿಯ ಪ್ರಸ್ತಾಪವಿದೆ; ಇಲ್ಲಿ ದೇವಗಣಗಳಿಗೆ ಒಡೆಯನಾದ ಇಂದ್ರನೇ ಗಣಪತಿ.

ವೈದಿಕದೇವತೆಯಾದ ರುದ್ರನಿಗೂ ಗಣಪತಿಗೂ ಸಂಬಂಧವನ್ನು ಸೂಚಿಸುವ ಒಂದು ಮಾತು ಶುಕ್ಲಯಜುರ್ವೇದದಲ್ಲಿ ದೊರೆಯುತ್ತದೆ. ರುದ್ರನ ಗಣಗಳಿಗೆ ಒಡೆತನ('ರುದ್ರಸ್ಯ ಗಾಣಪತ್ಯಂ')ವನ್ನು ಹೇಳುವ ಮಾತು ಇದು. ಯಜುರ್ವೇದದಲ್ಲಿಯೇ ಮತ್ತೊಂದು ಸಂದರ್ಭದಲ್ಲಿ ಗಣಪತಿಯ ಪ್ರಸ್ತಾಪ ಬರುತ್ತದೆ. ಕುದುರೆಯನ್ನು ವಸುರೂಪಿಯಾದ ಗಣಪತಿಯೆಂದು ವ್ಯವಹರಿಸಿರುವ ಸಂದರ್ಭ ಇದು. ಅಶ್ವಮೇಧ ಯಾಗದ ವೇಳೆ ಯಜಮಾನನ ಹೆಂಡತಿಯು, ಎಂದರೆ ರಾಣಿಯು, ಮೇಧವಾದ ಅಶ್ವದ ಪಕ್ಕದಲ್ಲಿ ಮಲಗಿಕೊಂಡು ಮುಂದಿನ ಮಂತ್ರವನ್ನು ಹೇಳಬೇಕೆನ್ನುವ ವಿಧಿಯಿದೆ—

ಗಣಾನಾಂ ತ್ವಾ ಗಣಪತಿಂ ಹವಾಮಹೇ
ಪ್ರಿಯಾಣಾಂ ತ್ವಾ ಪ್ರಿಯಪತಿಂ ಹವಾಮಹೇ
ನಿಧೀನಾಂ ತ್ವಾ ನಿಧಿಪತಿಂ ಹವಾಮಹೇ
ವಸೋ ಮಮ ಅಹಮಜಾನಿ
ಗರ್ಭಧಮತ್ವಮಜಾಸಿ ಗರ್ಭಧಂ ।

ಇಲ್ಲಿ ಗಣಪತಿ, ಪ್ರಿಯಪತಿ, ನಿಧಿಪತಿ ಎನಿಸಿಕೊಳ್ಳುವ ವಸುವು ಕುದುರೆಯೇ. ಈ ಮಂತ್ರದ ಅಭಿಮಾನಿದೇವತೆಯು ಅಶ್ವದೇವತೆ. ಇಲ್ಲಿಯ ಗಣಪತಿಯು ಸ್ತ್ರೀಗಣಗಳಿಗೆ ಒಡೆಯ, ಪಾಲಕ ಎನ್ನುವ ಅರ್ಥವಿದೆ.

ವೈದಿಕವಾಙ್ಮಯದಲ್ಲಿ ಗಣವೆಂಬ ಮಾತನ್ನು ಜನಗಳ ಗುಂಪು, ದೇವತೆಗಳ ಗೋಷ್ಠಿ, ಮಂತ್ರಗಳ ಸಮೂಹ ಎನ್ನುವ ಅರ್ಥಗಳಲ್ಲಿ

ಬಳಸಿರುವುದನ್ನು ಕಾಣಬಹುದು. ಶುಕ್ಲಯಜುರ್ವೇದದಲ್ಲಿಯೇ "ನಮೋ ಗಣೇಭ್ಯೋ ಗಣಪತಿಭ್ಯಶ್ಚವೋ ನಮಃ" ಎಂದು ಗಣಪತಿಯನ್ನು ಬಹುವಚನದಲ್ಲಿ ಉಲ್ಲೇಖಿಸಿದ್ದಾರೆ. ಭಾಷ್ಯಕಾರನಾದ ಮಹೀಧರನು ಗಣಪತಿಗಳೆಂದರೆ "ದೇವತೆಗಳ ಅನುಚರರಾದ ಭೂತಗಳ ಗುಂಪಿಗೆ ಒಡೆಯರು" ('ದೇವಾನುಚರಾಃ, ಭೂತವಿಶೇಷಗಣಾಃ, ಗಣಾನಾಂ ಪಾಲಕಾಃ ಗಣಪತಯಃ') ಎಂದು ಅರ್ಥಮಾಡಿದ್ದಾನೆ. ತೈತ್ತಿರೀಯಸಂಹಿತೆಯಲ್ಲಿ ಬರುವ ಗಣಪತಿಶಬ್ದಕ್ಕೆ ಭಾಷ್ಯಕಾರರು ಪಶುಪತಿಯೆನ್ನುವ ಅರ್ಥವನ್ನು ಹೇಳಿದ್ದಾರೆ; ಗಾಣಪತ್ಯವೆಂದರೆ ಅವರ ಪ್ರಕಾರ 'ಪಶುಸಮೂಹಪತಿತ್ವ'. ಪಶುಪತಿಯೆಂದರೆ ಶಿವ. ಶಿವನು ಗಣಪತಿಯೆನ್ನುವ ಕಲ್ಪನೆ ವೈದಿಕ ವಾಙ್ಮಯದಲ್ಲಿ ಕಾಣಬರುತ್ತದೆ ಎಂದರೆ ತಪ್ಪಲ್ಲ.

# ಶಿವ-ಗಣಪತಿ

ನಮ್ಮ ಇಂದಿನ ಕಲ್ಪನೆಯಲ್ಲಿ ಗಣಪತಿಯು ಶಿವ-ಪಾರ್ವತಿಯರ ಮಗ; ಪುರಾಣಗಳಲ್ಲಿ ಮೂಡಿಬಂದಿರುವ ಕಲ್ಪನೆಯಿದು. ಶಿವನ ಮಗನು ಮಾತ್ರವಲ್ಲ, ಗಣಪತಿಯು ಶಿವಗಣಗಳಿಗೆ ಒಡೆಯ (ಗಣನಾಥ), ಶಿವನ ದ್ವಾರಪಾಲಕ ಎಂದು ಮುಂತಾಗಿ ವಿವರಗಳಿವೆ. ಆದರೆ ಒಂದು ಕಾಲಕ್ಕೆ ಶಿವನೇ ಗಣಪತಿಯೆನ್ನುವ ನಂಬಿಕೆಯಿದ್ದಿತು. ವಾಲ್ಮೀಕಿ-ರಾಮಾಯಣದಲ್ಲಿ ಗಣೇಶ, ಲೋಕಶಂಭು, ಲೋಕಪಾಲ, ಮಹಾಭಾಗ, ಮಹಾಶೂಲಿ, ಮಹೇಶ್ವರ ಮೊದಲಾದ ಹೆಸರುಗಳೆಲ್ಲ ಶಿವನಿಗೇ ಅನ್ವಯಿಸಿರುವುದು ಕಾಣುತ್ತದೆ. ಶಿವನಂತೆಯೇ ಗಣಪತಿಗೂ ಹಣೆಗಣ್ಣಿದೆ, ಸರ್ಪಾಭರಣವಿದೆ, ಕೈಲಿ ಪರಶುವಿದೆ, ತಲೆಯಲ್ಲಿ ಚಂದ್ರಮನುಂಟು.

ಯಜುರ್ವೇದದ ಮೂರನೆಯ ಅಧ್ಯಾಯದಲ್ಲಿ ಬರುವ ಮಂತ್ರವೊಂದು ಶಿವ-ಗಣಪತಿಯರ ತಾದಾತ್ಮ್ಯವನ್ನು ಸೂಚಿಸುತ್ತದೆ. ಕಾಮ್ಯಕರ್ಮವೊಂದರ ಸಂದರ್ಭದಲ್ಲಿ ಪುರೋಡಾಶ-ಇಲಿಯನ್ನು ಭೂಮಿಯಲ್ಲಿ ಹೂಳುವಾಗ ಕೆಳಗಿನ ಮಂತ್ರವನ್ನು ಹೇಳಬೇಕೆನ್ನುವ ವಿಧಿಯಿದೆ—

ಏಷ ತೇ ರುದ್ರಭಾಗಃ ಸಹ ಸ್ವಸ್ರಾಂಬಿಕಯಾ
ತಂ ಜುಷಸ್ವ ಸ್ವಾಹೈಷತೇ ರುದ್ರಭಾಗ
ಆಖುಸ್ತೇ ಪಶುಃ ।

ರುದ್ರನು ತನ್ನ ಸೋದರಿಯಾದ ಅಂಬಿಕೆಯೊಂದಿಗೆ ಬಂದು ಈ ಇಲಿಯನ್ನು ಸ್ವೀಕರಿಸಬೇಕೆಂದು ಮಂತ್ರದ ಅರ್ಥ. ಆಖು ಎಂದರೆ ಇಲಿ. ಇಲಿಯೇ ರುದ್ರನ ಪಶುವೆಂದೂ, ಭಾಗ(ಸಮರ್ಪಿತ)ವೆಂದೂ ಇಲ್ಲಿ

ಕಾಣಬರುವ ಕಲ್ಪನೆ. ನಮ್ಮ ಗಣಪತಿಗೆ ಇಲಿಯೇ ಪಶು, ಎಂದರೆ ವಾಹನ, ಲಾಂಛನ; ಅವನು ಆಖುರಥನಷ್ಟೆ. ಗಣಪತಿಗೆ ಇಲಿಯು ಗಂಟುಬಿದ್ದುದು ಹೇಗೆ ಎಂದು ತಿಳಿಯುವುದಿಲ್ಲ. ಬಹುಶಃ, ಶಿವನೇ ಗಣಪತಿಯಾಗಿದ್ದ ಕಾಲದಲ್ಲಿ ಅವನಿಗೂ ಪುರೋಡಾಶ-ಇಲಿಗೂ ಇದ್ದ ಸಂಬಂಧ ಮುಂದೆಯೂ ಗಣಪತಿಗೆ ಒದಗಿಬಂದಿತು.

ಇದೇ ಮಂತ್ರದಲ್ಲಿ ಇನ್ನೊಂದು ಸ್ವಾರಸ್ಯವಾದ ಕಲ್ಪನೆಯಿದೆ. ಅಂಬಿಕೆಯನ್ನು ಶಿವನ ಸೋದರಿಯೆಂದು ಈ ಮಂತ್ರ ವ್ಯವಹರಿಸಿದೆ. ಇದೇ ಕಲ್ಪನೆ ತೈತ್ತಿರೀಯಸಂಹಿತೆಯಲ್ಲಿಯೂ ಕಾಣಬರುತ್ತದೆ. ಇಲ್ಲಿ ಸೋದರಿಯೆಂಬ ಮಾತಿಗೆ ಸಾಯಣಾಚಾರ್ಯರು "ಸೋದರಿಯಂತೆ ಹಿತಕಾರಿಣಿ" ('ಸ್ವಸ್ರಾ ಸೋದರೀ ವದ್ಧಿತಕಾರಿಣ್ಯಾ') ಎಂದೇನೋ ಅರ್ಥಮಾಡುತ್ತಾರೆ. ಆದರೆ ಇದು ಬಲವಂತದ ಎಳೆದಾಟ ಎನ್ನುವುದು ಸ್ಪಷ್ಟವಾಗಿದೆ. ಈಗ ನಮ್ಮ ಕಲ್ಪನೆಯಲ್ಲಿ ಅಂಬಿಕೆಯು ಶಿವನ ಹೆಂಡತಿ; ಆದರೆ ಒಂದು ಕಾಲದಲ್ಲಿ ಆಕೆಯು ಶಿವನ ಸೋದರಿಯೆಂಬ ಕಲ್ಪನೆಯಿದ್ದಿತು ಎನ್ನುವುದು ನಿರ್ವಿವಾದ. ಆದರೆ ಯಾವ ಕಾಲದಲ್ಲಿ ಹೇಗೆ, ಸೋದರಿಯಾದವಳು ಹೆಂಡತಿಯಾದಳು ಎಂದು ಗೊತ್ತಾಗುವುದಿಲ್ಲ. ತೈತ್ತಿರೀಯ-ಆರಣ್ಯಕದ ವೇಳೆಗಾಗಲೇ "ಅಂಬಿಕಾಪತಯ ಉಮಾಪತಯೇ ನಮೋ ನಮಃ" ಎನ್ನುವ ಮಾತು ಬರುತ್ತದೆ. ಯಮ-ಯಮಿಯರ ಸಂಬಂಧದಂತೆಯೇ ರುದ್ರ-ಅಂಬಿಕೆಯರ ಸಂಬಂಧವೂ ಇದ್ದಿತೋ?

ಇದು ಹೇಗಾದರೂ ಇರಲಿ. ರುದ್ರನಿಗೂ ಗಣೇಶನಿಗೂ ತಾದಾತ್ಮ್ಯವನ್ನು ಒಪ್ಪಿಕೊಂಡ ಕಾಲದಲ್ಲಿ ಗಣೇಶಗಾಯತ್ರಿಯು ಸಿದ್ಧವಾಯಿತು. ತೈತ್ತಿರೀಯ-ಆರಣ್ಯಕದ ಹತ್ತನೆಯ ಪ್ರಪಾಠಕದಲ್ಲಿ ಇದರ ಪಾಠವಿದೆ. "ತತ್ಪುರುಷಾಯ ವಿದ್ಮಹೇ ವಕ್ರತುಂಡಾಯ ಧೀಮಹಿ । ತನ್ನೋ ದಂತಿಃ ಪ್ರಚೋದಯಾತ್"—ಇದು ಗಣೇಶಗಾಯತ್ರಿ. ಇದನ್ನು ಪುರಾಣಗಳು ಸ್ವಲ್ಪ ಮಾರ್ಪಡಿಸಿ 'ತತ್ಪುರುಷಾಯ' ಎನ್ನುವುದರ ಬದಲು 'ಏಕದಂತಾಯ' ಎಂದು ಹೇಳುತ್ತವೆ. ಆದರೆ ಪ್ರಾಚೀನಪಾಠವು ರುದ್ರಗಾಯತ್ರಿಯನ್ನೇ ಅವಲಂಬಿಸಿದೆಯೆನ್ನುವುದು ದಿಟ. "ತತ್ಪುರುಷಾಯ ವಿದ್ಮಹೇ ಮಹಾದೇವಾಯ ಧೀಮಹಿ; ತನ್ನೋ ರುದ್ರಃ ಪ್ರಚೋದಯತ್" ಎನ್ನುವುದು

ರುದ್ರಗಾಯತ್ರಿ. ಎರಡು ಗಾಯತ್ರಿಗಳಲ್ಲಿಯೂ ಬರುವ 'ತತ್ಪುರುಷ'ನೆಂಬ ಹೆಸರು ಸ್ವಾರಸ್ಯವಾದುದು. ತತ್ಪುರುಷವೆಂಬುದು ಶಿವನ ಪಂಚಮುಖಗಳಲ್ಲಿ ಒಂದು (ಈಶಾನ, ಸದ್ಯೋಜಾತ, ಅಘೋರ, ವಾಮದೇವ—ಇವು ಉಳಿದ ನಾಲ್ಕು). ಇದನ್ನು ಗಣೇಶಗಾಯತ್ರಿಯಲ್ಲಿಯೂ ಉಳಿಸಿಕೊಂಡರು.

ಶಿವನಂತೆಯೇ ಗಣಪತಿಗೂ ಸ್ವಯಂಭುಮೂರ್ತಿಗಳುಂಟು. ಯಾವೊಂದು ನಿರ್ದಿಷ್ಟವಾದ ಆಕಾರವಿಲ್ಲದೆ, ಮನುಷ್ಯನ ಕೈ ತಾಗದೆ, ತಾನೇತಾನಾಗಿ ಮೈದಳೆದು ನಿಂತ ಗುಂಡುಗಲ್ಲು, ಬೋರುಬಂಡೆಗಳನ್ನೇ ಗಣಪತಿಯೆಂದು ಪೂಜಿಸುವ ಪದ್ಧತಿಯಿದೆ. ಶಿವಲಿಂಗಗಳಂತೆಯೇ ಕಾಣುವ ಗಣಪತಿಮೂರ್ತಿಗಳು ನೂರಾರು ಇವೆ. ಕಾಶ್ಮೀರದಲ್ಲಿ ಶ್ರೀನಗರದ ಬಳಿಯಿರುವ ಹರಪರ್ವತವೆಂಬ ಬೆಟ್ಟದ ಕೆಳಗೆ ಭೀಮಸ್ವಾಮಿ ಎನಿಸಿಕೊಳ್ಳುವ ಬೋರುಬಂಡೆಯೊಂದಿದೆ. ಇದಕ್ಕೆ ಕೆಂಪುಬಣ್ಣ ಬಳಿದು ಗಣಪತಿಯೆಂದು ಪೂಜಿಸುತ್ತಾರೆ. ಇದೇ ಪ್ರದೇಶದಲ್ಲಿಯೇ ಕೃಷ್ಣಗಂಗಾನದಿಯ ಮೇಲೆ ಗಣೇಶಘಾಟಿಯೆನ್ನುವ ಕಡೆ ಐವತ್ತು ಅಡಿ ಎತ್ತರದ ಬಂಡೆಯೊಂದನ್ನೇ ಗಣಪತಿಯೆಂದು ಆರಾಧಿಸುತ್ತಾರೆ. ಹೀಗೆ ದೇಶದ ಹಲವೆಡೆ ಗಜಮುಖವಾಗಲೀ ಪುರುಷದೇಹವಾಗಲೀ ಇಲ್ಲದೆ, ವ್ಯಕ್ತಾವ್ಯಕ್ತವಾಗಿರುವ ಬಂಡೆಗಳಲ್ಲಿ ಗಣಪತಿಯನ್ನು ಕಾಣುವ ಮನೋಧರ್ಮವು ಶೈವಹಿನ್ನೆಲೆಯನ್ನು ಸೂಚಿಸುತ್ತದೆ.

ಗಾಣಪತ್ಯರೂ ಶೈವರಂತೆಯೇ ಲಿಂಗಪೂಜಕರು. ಅವರು ತಮ್ಮ ನಿತ್ಯಾರ್ಚನೆಯಲ್ಲಿ ಗಣಪತಿಲಿಂಗಗಳನ್ನು ಬಳಸುತ್ತಾರೆ. ಜಂಬೂಫಲದ ಆಕಾರದಲ್ಲಿರುವ ಈ ಲಿಂಗಗಳನ್ನು ಶಿವಗಣಗಳೇ ಪೂಜಿಸುತ್ತಿದ್ದುವೆಂದು ಅವರ ಶ್ರದ್ಧೆ. ಜಾವಾದೇಶದವರು ಗಣಪತಿಯನ್ನು ಕಾಲಾಂತಕನೆಂದು ವ್ಯವಹರಿಸುತ್ತಾರೆ; ಕಾಲಾಂತಕನೆನ್ನುವುದು ಶಿವನ ಪ್ರಶಸ್ತಿಯಷ್ಟೆ. ಶಿವನಿಗೆ ಪಂಚಮುಖವಿದ್ದಂತೆಯೇ ಗಣಪತಿಗೂ ಪಂಚಮುಖಗಳನ್ನು ನಮ್ಮವರು ಕಲ್ಪಿಸಿದ್ದಾರೆ. ಸಿಂಹವಾಹನನಾದ ಹೇರಂಬ-ಗಣಪತಿಗೆ ಐದು ಮುಖಗಳು, ಹತ್ತು ಕೈಗಳು. ಭೈರವಸ್ವರೂಪದ ಗಣಪತಿಮೂರ್ತಿಗಳೂ ಜಾವಾ ಮುಂತಾದೆಡೆ ಕಾಣಬರುತ್ತವೆ.

ಗಾಣಪತ್ಯಪಂಥದವರು ನಮ್ಮಲ್ಲಿ ಬಹುಕಾಲ ಬಾಳಲಿಲ್ಲ. ಶೈವರು ಪ್ರಬಲರಾದಂತೆ ಈ ಕೇವಲ ಗಣಪತಿಪೂಜಕರು ಹಿಂದೆಬಿದ್ದರು. ಗಣಪತಿಯೇ ಸರ್ವಶ್ರೇಷ್ಠದೇವತೆಯೆಂದೂ ಪರಬ್ರಹ್ಮನೆಂದೂ ನಂಬಿದ್ದ ಈ ಗಾಣಪತ್ಯರ ಪ್ರಭಾವವು ಗಣಪತ್ಯಥರ್ವಶೀರ್ಷ ಮತ್ತು ಗಣೇಶ-ಪೂರ್ವೋತ್ತರ-ತಾಪನೀಯ-ಉಪನಿಷತ್ತುಗಳಲ್ಲಿ ಪರ್ಯವಸಾನವಾಯಿತು.

ಓಂ ನಮಸ್ತೇ ಗಣಪತಯೇ ತ್ವಮೇವ ಪ್ರತ್ಯಕ್ಷಂ ತತ್ತ್ವಮಸಿ
ತ್ವಮೇವ ಕೇವಲಂ ಕರ್ತಾಸಿ..... ಧರ್ತಾಸಿ
ತ್ವಮೇವ ಖಲ್ವಿದಂ ಬ್ರಹ್ಮಾಸಿ ತ್ವಂ ಸಾಕ್ಷಾದಾತ್ಮಾಸಿ ನಿತ್ಯಂ

ಈ ಮಂತ್ರವು ಅವರ ಮನೋಧರ್ಮವನ್ನು ಸ್ಪಷ್ಟಗೊಳಿಸುತ್ತದೆ. ಶೈವರು ಮೇಲೆ ಬಂದಾಗ ಗಣಪತಿಯು ಶಿವನ ಗಣಗಳಿಗೆ ಒಡೆಯನಷ್ಟೇ ಆಗಿ ಉಳಿದನು. ಗಣನಾಥನಾಗಿದ್ದಾಗಲೂ ಶಿವನಿಗೂ ಅವನಿಗೂ ವಿರಸ ಒದಗಿದ ಹಲವಾರು ಸಂದರ್ಭಗಳು ಪುರಾಣಪ್ರಸಿದ್ಧವಾದುವು. ಶಿವನು ಗಣೇಶನ ತಲೆಯನ್ನೇ ಕತ್ತರಿಸಿದ ಕಥೆ ಎಲ್ಲರಿಗೂ ತಿಳಿದಿದೆಯಷ್ಟೆ. ಇದೇ ಹಿನ್ನೆಲೆಯಲ್ಲಿ ತಾಂತ್ರಿಕದೇವತೆಗಳಾದ ವಿಘ್ನಾಂತಕ, ಅಪರಾಜಿತಾ, ಮಹಾಕಾಲ ಇವರ ಸಂಕೇತಗಳನ್ನು ಪರಿಶೀಲಿಸಬೇಕು. ವಿನಾಯಕನನ್ನು ಮೆಟ್ಟಿನಿಂತಿರುವ ಮಹಾಕಾಲನು ಶಿವನೇ; ಸಂಹಾರಕಾರಕನಾದ ಶಿವನ ಲೀಲಾವಿಶೇಷವೇ ಮಹಾಕಾಲ. ವಿನಾಯಕನನ್ನು ನಿಗ್ರಹಿಸಿರುವ ಅಪರಾಜಿತೆಯೂ ಶಿವನ ಅವತಾರವೇ. ಏಕಾದಶರುದ್ರರಲ್ಲಿ ಅಪರಾಜಿತನೂ ಒಬ್ಬ. ಗಾಣಪತ್ಯರನ್ನು ಪರಾಭವಗೊಳಿಸಿ ಪ್ರಬಲರಾದ ಶೈವರ ಮನೋಧರ್ಮ ಇಲ್ಲಿ ಒಡೆದು ಕಾಣುತ್ತದೆ.

ಗಣಪತಿಯನ್ನು ಶಿವನ ದ್ವಾರಪಾಲಕನಾಗಿ ನಿಲ್ಲಿಸಿದುದೂ ಇದೇ ಸಂದರ್ಭದಲ್ಲಿ. ಬ್ರಹ್ಮವೈವರ್ತಪುರಾಣದಲ್ಲಿ ಗಣಪತಿಯು ಏಕದಂತನಾದ ಕಥೆ ಬರುತ್ತದೆ. ಗಣಪತಿಯು ಶಿವನ ದ್ವಾರಪಾಲಕನಾಗಿದ್ದಾಗ ಪರಶುರಾಮನು ಶಿವನನ್ನು ಕಾಣಲು ಬಂದನಂತೆ. ಬಾಗಿಲು ಕಾಯುತ್ತಿದ್ದ ಗಣೇಶನು ಅವನನ್ನು ತಡೆದನಂತೆ. ಇಬ್ಬರಿಗೂ ಬಡಿದಾಟ ಆರಂಭವಾಗಿ ಪರಶುರಾಮನ ಕೊಡಲಿಯ ಪೆಟ್ಟಿನಿಂದ ಗಣೇಶನ ದಂತವೊಂದು

ಮುರಿದುಬಿದ್ದಿತಂತೆ. ವರಾಹಪುರಾಣದಲ್ಲಿಯೂ 'ರುದ್ರವಕ್ತ್ರೋತ್ಥ'ನಾದ ಗಣಪತಿಯು ಶಿವನ ದ್ವಾರಪಾಲಕ. ನೇಪಾಳ ಮತ್ತು ಟಿಬೆಟ್‌ದೇಶಗಳಲ್ಲಿ ಬೌದ್ಧಮಂದಿರಗಳ ದ್ವಾರದೇಶದಲ್ಲಿ ಗಣಪತಿಯನ್ನು ನಿಲ್ಲಿಸುವ ಪದ್ಧತಿಯಿದೆ. ಇದಕ್ಕೆ ಒಂದು ಕಥೆಯನ್ನೂ ಅವರು ಕಟ್ಟಿದ್ದಾರೆ. ವೈಶಾಲಿಯಲ್ಲಿ ದ್ವಾರಪಾಲಕನಾಗಿದ್ದವನೊಬ್ಬನು ತಾನು ತೀರಿಕೊಳ್ಳುವ ಮುನ್ನ ಊರ ಜನರಿಗೆ "ನನ್ನ ಮೂರ್ತಿಯೊಂದನ್ನು ಮಾಡಿಸಿ ಕೊರಳಿನಲ್ಲಿ ಘಂಟೆಗಳ ಸರವನ್ನು ಹಾಕಿ. ಆರ್ತರು ಈ ಘಂಟೆಗಳನ್ನು ಸದ್ದುಮಾಡಿದರೆ ಅವರ ಅನಿಷ್ಟಗಳು ಮರೆಯಾಗುತ್ತವೆ" ಎಂದು ಹೇಳಿದನಂತೆ. ಜನರು ಹಾಗೆಯೇ ಘಂಟಾಮಾಲೆಯನ್ನು ಧರಿಸಿದ ದ್ವಾರಪಾಲ-ಯಕ್ಷನ ಮೂರ್ತಿಯೊಂದನ್ನು ಮಾಡಿಸಿದರಂತೆ. ಯಕ್ಷನಂತೆ ಕುಳಿತ ಭೂಮಾರದ ದ್ವಿಭುಜ-ಗಣಪತಿಯ ಮೂರ್ತಿಯಲ್ಲಿ ಈ ಘಂಟಾಸರವನ್ನು ಕಾಣಬಹುದು. ಇದು ಕ್ರಿಸ್ತಾಬ್ದ ಐದನೆಯ ಶತಮಾನದ ಶಿಲ್ಪವೆಂದು ಹೇಳುತ್ತಾರೆ.

ಭಾರತದಲ್ಲಿ ದೊರೆತಿರುವ ಅತಿಪ್ರಾಚೀನ ಗಣಪತಿಚಿತ್ರಣಗಳಲ್ಲಿ ಕೆಲವು ಐಹೊಳೆಯ ಮತ್ತು ಬಾದಾಮಿಯ ದೇಗುಲಗಳಲ್ಲಿವೆ. ಇವು ಕ್ರಿಸ್ತಾಬ್ದ ಆರನೆಯ ಶತಮಾನದವು. ಈ ಶಿಲ್ಪಗಳಲ್ಲಿ ಗಣೇಶನು ತಾಂಡವಶಿವನ ಪರಿವಾರದೇವತೆಗಳಲ್ಲಿ ಒಬ್ಬನಷ್ಟೆ. ಗಣಪತಿಯು ಶಿವನ ಮಗನೆಂಬ ಕಲ್ಪನೆಯೂ ಮುಂದೆ ಎಂದೋ ಮೂಡಿಬಂದಿತೆಂದು ತೋರುತ್ತದೆ.

# ವಿನಾಯಕ-ಗಣಪತಿ

ಕ್ರಿಸ್ತಯುಗದ ಆರಂಭದೆಸೆಯಲ್ಲಿ ಗಣಪತಿಯ ಪೂಜೆಯು ಬಳಕೆಗೆ ಬಂದಿತೆಂದು ಕೆಲವರ ವಾದ. ಪ್ರಾಚೀನ ಗೃಹ್ಯಸೂತ್ರಗಳಲ್ಲಿಯೂ ಧರ್ಮಸೂತ್ರಗಳಲ್ಲಿಯೂ ಗಣೇಶನ ಪೂಜೆಯನ್ನು ಕಾರ್ಯಾರಂಭದಲ್ಲಿ ಮಾಡಬೇಕೆನ್ನುವ ವಿಧಿಯು ಕಂಡುಬರುವುದಿಲ್ಲ. ಇಂಥ ವಿಧಿಯು ಮೊಟ್ಟಮೊದಲಿಗೆ ಕಾಣಸಿಗುವುದು ಗೋಭಿಲಸ್ಮೃತಿಯಲ್ಲಿ. ಇದರ ಕಾಲವು ಕ್ರಿಸ್ತಾಬ್ದದ ಮೊದಲ ವರ್ಷಗಳೇ. ಎಲ್ಲ ಸಂಸ್ಕಾರಗಳಿಗೂ ಮೊದಲು 'ಗಣಾಧಿಪ'ನ ಪೂಜೆ ಮಾಡಬೇಕೆಂಬ ಪ್ರಸ್ತಾಪ ಇಲ್ಲಿ ಬರುತ್ತದೆ. ಮುಂದೆ ಮೈದಳೆದ ಬೌಧಾಯನಸೂತ್ರದಲ್ಲಿ ವಿನಾಯಕನಿಗೆ ಮೋದಕ ಮತ್ತು ಅಪೂಪಗಳನ್ನು ಸಮರ್ಪಣೆ ಮಾಡುವ ಉಲ್ಲೇಖವಿದೆ. ಇಲ್ಲಿ ವಿನಾಯಕನನ್ನು ಭೂತನಾಥ, ಹಸ್ತಿಮುಖ, ವಿಘ್ನೇಶ್ವರ ಎಂದು ಬಣ್ಣಿಸಿದ್ದಾರೆ.

ಮೂರನೆಯ ಶತಮಾನದ ಸುಮಾರಿಗೆ ಸಿದ್ಧವಾದ ಯಾಜ್ಞವಲ್ಕ್ಯ ಸ್ಮೃತಿಯಲ್ಲಿ ರುದ್ರನೂ ಬ್ರಹ್ಮನೂ ಗಣಗಳ ವ್ಯವಹಾರವನ್ನು ನಿರ್ವಹಿಸಲು ನಾಲ್ಕು ಮಂದಿ ವಿನಾಯಕರನ್ನು ನಿರ್ಮಿಸಿದರೆನ್ನುವ ಪ್ರಸ್ತಾಪವಿದೆ. ಗಣಪತಿಗೆ ವಿನಾಯಕನೆನ್ನುವ ಹೆಸರೇನೋ ಪ್ರಾಚೀನವಾದುದೇ. ವಿ-ನಾಯಕರೆಂದರೆ ವಿಶಿಷ್ಟವಾದ ಶಾಸನಗಳನ್ನು ಮಾಡುವ ನಾಯಕರು. ಈ ನಾಯಕರು ಅನಿಷ್ಟಕಾರಕರಾದ ಕ್ಷುದ್ರಶಕ್ತಿಗಳು. ಆಚಾರಾಧ್ಯಾಯದಲ್ಲಿ 281 ವಿನಾಯಕರ ಪ್ರಸ್ತಾಪವಿದೆ. ಭಾಗವತಪುರಾಣದಲ್ಲಿ ಡಾಕಿನಿಯರು, ಯಾತುಧಾನರು, ಕೂಷ್ಮಾಂಡರು, ಮಕ್ಕಳನ್ನು ಪೀಡಿಸುವ ಅರ್ಭಕಗ್ರಹಗಳು, ಭೂತ-ಪ್ರೇತ-ಪಿಶಾಚಗಳು, ಯಕ್ಷ-ರಕ್ಷಸರು ಮತ್ತು ವಿನಾಯಕರು ಒಟ್ಟಿಗೆ ಪ್ರಸ್ತಾಪಕ್ಕೆ ಬರುತ್ತಾರೆ. ಹರಿವಂಶವು "ರಾಕ್ಷಸಾಶ್ಚ ಪಿಶಾಚಾಶ್ಚ ಭೂತಾನಿ ಚ ವಿನಾಯಕಾಃ" ಎಂಬ ಮಾತನ್ನು ನಿಲ್ಲಿಸಿದೆ. ಹೀಗೆ ಅಡ್ಡಿಗಳನ್ನು ಒಡ್ಡುವುದೇ

ಪ್ರಮುಖ ಪ್ರವೃತ್ತಿಯಾಗಿ ಉಳ್ಳ ವಿನಾಯಕಗಣಗಳಿಗೆ ಒಡೆಯನೇ ವಿನಾಯಕ-ಗಣಪತಿಯೆನಿಸಿಕೊಂಡವನು.

ಮೇಲೆ ಹೇಳಿದ ಯಾಜ್ಞವಲ್ಕ್ಯಸ್ಮೃತಿಯಲ್ಲಿ ನಾಲ್ವರು ವಿನಾಯಕರ ಪ್ರಸ್ತಾಪ ಬಂದಿತಷ್ಟೆ. ಮಿತ, ಸಮ್ಮಿತ್ರ, ಶಾಲಕ ಟಂಕಟ, ಕೂಷ್ಮಾಂಡರಾಜ ಪುತ್ರ—ಈ ನಾಲ್ವರು ಒಬ್ಬನೇ ವಿನಾಯಕನ ನಾಲ್ಕು ರೂಪಗಳೆಂದು ಅಲ್ಲಿಯೇ ಧ್ವನಿತವಾಗುತ್ತದೆ. ಇವನು ಅಂಬಿಕೆಯ ಮಗನಂತೆ, ಎಲ್ಲ ಕೆಲಸಗಳನ್ನೂ ಅಡ್ಡಗಿಸುವವನಂತೆ. ಇವನನ್ನು ಇವನ ನಾಲ್ಕು ರೂಪ ಗಳಲ್ಲಿಯೂ ಪ್ರಸನ್ನಗೊಳಿಸಲು ಉಪಾಯಗಳನ್ನು ಕೂಡ ಇದೇ ಸ್ಮೃತಿಯು ವಿವರಿಸುತ್ತದೆ. ಮಾನವಗೃಹ್ಯಸೂತ್ರವೂ ಶಾಲಕಟಂಕಟ, ಕೂಷ್ಮಾಂಡರಾಜ ಪುತ್ರ, ಉಸ್ಮಿತ, ದೇವಯಜನ ಎಂಬ ನಾಲ್ವರು ವಿನಾಯಕರನ್ನು ಹೇಳುತ್ತದೆ. ನಷ್ಟ, ಕಷ್ಟ, ಅಡ್ಡಿ, ಆತಂಕ, ಹಾನಿ, ಭೀತಿ, ದುಃಸ್ವಪ್ನ ಮುಂತಾದುವುಗಳಿಗೆ ಈ ವಿನಾಯಕರೇ ಕಾರಣರೆಂದು ಇಲ್ಲಿ ಬರುವ ವಿವರಣೆ.

ವರಾಹಪುರಾಣದಲ್ಲಿ ಒಂದು ಕಥೆಯಿದೆ. ಶಿವನು ಒಮ್ಮೆ ನಕ್ಕಾಗ ಅವನ ನಗೆಯಿಂದ ಹುಟ್ಟಿದ ಶಿಶುವೇ ಗಣೇಶ. ಪಾರ್ವತಿಯು ಅವನ ಸೌಂದರ್ಯಕ್ಕೆ ಬೆರಗಾಗಿ ಅವನನ್ನೇ ಎವೆಯಿಕ್ಕದೆ ನೋಡತೊಡಗಿದಳು. ಇದರಿಂದ ಈರ್ಷ್ಯೆಗೊಂಡ ಶಿವನು ಮಗುವನ್ನು ಪ್ರಲಂಬಜಠರನೂ ಗಜಮುಖನೂ ಆಗೆಂದು ಶಪಿಸಿದನು. ಅನಂತರ ಪ್ರಸನ್ನನಾಗಿ ಈ ಶಿಶುವೇ ತನ್ನ ಭೂತಗಣಗಳಿಗೂ ವಿನಾಯಕರಿಗೂ ನಾಯಕನಾಗೆಂದು ವಿಧಿಸಿ "ಎಲ್ಲರೂ ಎಲ್ಲ ಕಾರ್ಯಗಳ ಮೊದಲಲ್ಲೂ ನಿನ್ನನ್ನೇ ಆರಾಧಿಸಲಿ; ಇಲ್ಲವಾದರೆ ಅವರ ಕೆಲಸಗಳು ಕೈಗೂಡದಿರಲಿ, ಅಡ್ಡಿ-ಆತಂಕಗಳು ಒದಗಲಿ" ಎಂದು ಅಪ್ಪಣೆಮಾಡಿದನು. ಅಂದಿನಿಂದ ಗಣಪತಿಯು ವಿಘ್ನರಾಜನಾದನು, ಎಂದರೆ ಅಡ್ಡಿ-ಆತಂಕಗಳು ಅವನಿಂದಲೇ ಒದಗುವುವು.

ಇದೇ ಧ್ವನಿಯುಳ್ಳ ಮತ್ತೊಂದು ಕಥೆ ಸ್ಕಂದಪುರಾಣದಲ್ಲಿ ಬರುತ್ತದೆ. ದ್ವಾಪರಯುಗವು ಕಳೆದು ಕಲಿಯುಗವಿನ್ನೂ ಆರಂಭವಾಗದಿದ್ದಾಗ ಪಾಪಿಗಳೂ ಮ್ಲೇಚ್ಛರೂ ಧರ್ಮಬಾಹಿರರೂ ಸೋಮನಾಥದ ಜ್ಯೋತಿರ್ಲಿಂಗವನ್ನು ಅರ್ಚಿಸಿ ಸ್ವರ್ಗವನ್ನು ಸೇರುತ್ತಿದ್ದರಂತೆ. ಸ್ವರ್ಗದಲ್ಲಿ

ಸ್ಥಳಾಭಾವದಿಂದ ಸಂತ್ರಸ್ತರಾದ ದೇವತೆಗಳು ಪಾರ್ವತಿಯ ಬಳಿ ಬಂದು ಈ ವಿಚಾರವನ್ನು ಅರಿಕೆಮಾಡಿಕೊಂಡರಂತೆ. ದೇವಿಯು ಆಗ ತನ್ನ ಮೈಯನ್ನುಜ್ಜಿ ಗಜಮುಖದ ವಿನಾಯಕನನ್ನು ಸೃಷ್ಟಿ ಮಾಡಿದಳಂತೆ. ಈ ವಿನಾಯಕನು ಜನರಲ್ಲಿ ಲೋಭವನ್ನೂ ಕಾಮವನ್ನೂ ತುಂಬಿ ಅವರ ಪುಣ್ಯಸಂಚಯನಕ್ಕೆ ಅಡ್ಡಿಯನ್ನೊಡ್ಡಿ ಸ್ವರ್ಗವನ್ನು ಸೇರುವವರ ಸಂಖ್ಯೆಯನ್ನು ಕಡಮೆ ಮಾಡಿದನಂತೆ! ದೇವತೆಗಳಿಗೆ ಹಿತವಾದರೂ ಜನರಿಗೆ ಅಹಿತವನ್ನುಂಟುಮಾಡುವ ಶಕ್ತಿ ವಿನಾಯಕನದು.

ವಿನಾಯಕನು ನೇಪಾಳ, ಟಿಬೆಟ್‌ದೇಶಗಳಿಗೆ ಹೋದುದು ಇದೇ ಸ್ವಭಾವದಲ್ಲಿಯೇ. ಒಡ್ಡಿಯಾನದ ಪಂಡಿತನೊಬ್ಬನು ಖಟ್ಮಂಡುನಗರದಲ್ಲಿ ಭಾಗಮತೀನದಿಯ ದಡದ ಮೇಲೆ ಕುಳಿತು ಸಿದ್ಧಿಗಳ ಪ್ರಾಪ್ತಿಗಾಗಿ ತಪಸ್ಸು ಮಾಡುತ್ತಿದ್ದನಂತೆ. ಇವನ ಸಾಧನೆಗಳಿಗೆ ಗಣೇಶನು ಎಡೆಬಿಡದೆ ಅಡ್ಡಿಯನ್ನೊಡ್ಡುತ್ತಿದ್ದುದನ್ನು ಕಂಡು ಪಂಡಿತನು ವಿಘ್ನಾಂತಕನೆಂಬ ದೇವತೆಯಲ್ಲಿ ಮೊರೆಯಿಟ್ಟನಂತೆ. ಆಗ ವಿಘ್ನಾಂತಕನು ಮೈದಳೆದು ವಿಘ್ನರಾಜನನ್ನು ನಿಗ್ರಹಿಸಿದನಂತೆ. ಗಣೇಶನನ್ನೇರಿ ಕುಳಿತ ವಿಘ್ನಾಂತಕನ ಶಿಲ್ಪಕೃತಿಗಳು ನೇಪಾಳದಲ್ಲಿಯೂ ಟಿಬೆಟ್ಟಿನಲ್ಲಿಯೂ ಬಹಳ ಇವೆ. ಟಿಬೆಟ್‌ನಲ್ಲಿ ಧರ್ಮಪಾಲನೆನಿಸಿದ ಮಹಾಕಾಲನೂ ಮಂಜುಶ್ರೀ-ಬೋಧಿಸತ್ತ್ವನೂ ಗಣೇಶನನ್ನು ಮೆಟ್ಟಿನಿಂತಂತೆ ಚಿತ್ರಿಸುತ್ತಾರೆ. ಗಣೇಶನನ್ನು ಒಂದು ಕಾಲಿನಿಂದ ತುಳಿಯುತ್ತ ಕುಳಿತ ಅಪರಾಜಿತಾದೇವಿಯನ್ನು 'ಗಣಪತಿ-ಸಮಾಕ್ರಾಂತೆ' ಯೆಂದು ಆ ದೇಶದ ಸಾಧನೆಗಳೂ ಧಾರಣೆಗಳೂ ಬಣ್ಣಿಸುತ್ತವೆ.

ತಾಂತ್ರಿಕ ಬೌದ್ಧಸಂಪ್ರದಾಯದ 'ಸಾಧನಮಾಲೆ'ಯೆನ್ನುವ ಗ್ರಂಥದಲ್ಲಿ ಗಣಪತಿಯೆಂದರೆ ವಿಘ್ನವೇ. ನಮ್ಮ ವರಾಹಪುರಾಣದಲ್ಲಿಯೂ ಗಣೇಶ ಸ್ತುತಿಯೊಂದು "ನಮೋಸ್ತುತೇ ವಿಘ್ನಕರ್ತ್ರೇ" ಎಂದೇ ಆರಂಭವಾಗುತ್ತದೆ. ಅಮರಕೋಶಕಾರನೂ ವಿನಾಯಕನ ಹೆಸರುಗಳನ್ನು ಹೇಳುತ್ತ "ವಿನಾಯಕೋ ವಿಘ್ನರಾಜಃ" ಎಂದೇ ಮೊದಲು ಮಾಡಿದ್ದಾನಷ್ಟೆ? ವಿಘ್ನರಾಜನೆಂದರೆ ಅಡ್ಡಿಗಳಿಗೆ ಒಡೆಯ, ಆತಂಕಗಳಿಗೆ ಅಧಿಪತಿ.

ಹೀಗೆ ಬೇಡವಾದುದನ್ನು ತಂದೊಡ್ಡುವ ಈ ಯಕ್ಷನಿಗೆ ಅಡ್ಡಾದಿಡ್ಡಿ

ಆಕಾರವನ್ನು ಕಲ್ಪಿಸಿದುದು ಆಶ್ಚರ್ಯವೇನಲ್ಲ. ಪಂಡಿತ ಸಂಪೂರ್ಣಾನಂದರು ತಮ್ಮ ಹಿಂದೀ 'ಗಣೇಶ'ಗ್ರಂಥದಲ್ಲಿ ಸ್ಮೃತಿಗಳ ಕಾಲದ ವಿನಾಯಕರ ಚಿತ್ರಗಳನ್ನು ಸೇರಿಸಿದ್ದಾರೆ (ಅಧ್ಯಾಯ ಎರಡು). ಅವುಗಳ ಪ್ರತಿಕೃತಿಗಳನ್ನು ನೋಡಿದರೆ ವಿನಾಯಕರ ಪ್ರಾಚೀನ ಸ್ವರೂಪಗಳೇ ಎನ್ನಬಹುದು. ಈ ಚಿತ್ರಣದ ಮೂಲವನ್ನೇನೋ ಅವರು ಸ್ಪಷ್ಟಮಾಡಿಲ್ಲ. ಆದರೆ ಮಧ್ಯಯುಗದ ಹಲವಾರು ಶಿಲ್ಪಗಳಲ್ಲಿ ಇಂಥವೇ ಮೂರ್ತಿಗಳು ಕಾಣಸಿಗುತ್ತವೆ. ಗಣಪತಿಯ ವಿಕಟ ಆಕಾರದ ಕಲ್ಪನೆ ಹೇಗೆ ಬಂದಿತು, ವಿಕಾರವಾದ ರೂಪ ಬೆಳೆದುಬಂದುದು ಹೇಗೆ—ಎಂಬುದು ಈ ಚಿತ್ರಗಳಿಂದ ತಿಳಿಯುತ್ತದೆ. ಬೇತಾಳದಂತೆ, ಬ್ರಹ್ಮರಾಕ್ಷಸದಂತೆ, ಪಿಶಾಚದಂತೆ ಗಣಪತಿಯನ್ನು ಬಗೆದಿದ್ದ ಕಾಲವೊಂದಿದ್ದಿತು. ಈ ಗಣಪತಿ-ವಿನಾಯಕನ ಅನುಚರರಾದ ವಿನಾಯಕರೂ ಕ್ರೂರಕರ್ಮಿಗಳು, ಪ್ರಚಂಡರು ಎಂದು ವರಾಹಪುರಾಣ ಬಣ್ಣಿಸುತ್ತದೆ; ಅವರೆಲ್ಲರಿಗೂ ಆನೆಯ ಮುಖ, ಅವರ ಮೈ ಬಣ್ಣ ಕೆಂಪು, ಕಣ್ಣು ನೀಲಿ, ಎಲ್ಲರೂ ಶಸ್ತ್ರಧಾರಿಗಳು. ಅವರು ಕಾಣಿಸಿಕೊಂಡಂದು ದೇವತೆಗಳು ನಡುಗಿದರಂತೆ. ಅವರೆಲ್ಲರ ಒಡೆಯನು ಇನ್ನೆಷ್ಟು ಭಯಂಕರನಾಗಿರಬೇಕಷ್ಟೆ?

# ಗೌರೀಪುತ್ರ-ವಿನಾಯಕ

ವಿನಾಯಕನನ್ನು ಶಿವಪುತ್ರನೆನ್ನುವುದಕ್ಕಿಂತ ಗೌರೀಪುತ್ರನೆನ್ನುವ ವಾಡಿಕೆ ಹೆಚ್ಚು. ಇದು ಕೇವಲ ವ್ಯವಹಾರವೈಶಿಷ್ಟ್ಯವೆಂದಲ್ಲ; ಪುರಾಣಗಳಲ್ಲಿಯೂ ಸ್ಮೃತಿಗಳಲ್ಲಿಯೂ ಕಲ್ಪಗಳಲ್ಲಿಯೂ ಗಣಪತಿಗೂ ಗೌರಿಗೂ ಇರುವ ಸಂಬಂಧ ಗಣಪತಿಗೂ ಶಿವನಿಗೂ ಇಲ್ಲ. ಗೌರೀಪೂಜೆಯ ಸಂದರ್ಭದಲ್ಲಿಯೇ ಗಣಪತಿಯ ಪೂಜೆ ಒದಗುವುದೂ, ಶಿವರಾತ್ರಿಗೂ ಗಣೇಶಚತುರ್ಥಿಗೂ ಯಾವ ನಂಟೂ ಇಲ್ಲದಿರುವುದೂ ಆಕಸ್ಮಿಕವಲ್ಲ. ಶಕ್ತಿಪೂಜೆಯ ಅಂಗವಾಗಿಯೇ ಗಣಪತಿಪೂಜೆ ಮೈದಳೆಯಿತು. ಕ್ರಿಸ್ತಾಬ್ದದ ಆರಂಭದೆಸೆಯಲ್ಲಿ ಪ್ರಚಲಿತವಾಗಿದ್ದ ಮಾತೃಕಾಪೂಜೆಯೊಂದಿಗೇ ಗಣಪತಿಪೂಜೆಯೂ ಬಳಕೆಗೆ ಬಂದಿತು. ಇದನ್ನು ಸ್ಮೃತಿಗಳು ಸೂಚಿಸುತ್ತವೆ.

'ಮಾತೃ' ಎಂದರೆ ಪ್ರಪಂಚದ ಸೃಷ್ಟಿಗೆ ಕಾರಣಳಾದ ತಾಯಿ. ಅವಳ ವಿಭಿನ್ನ ಲಕ್ಷಣಗಳನ್ನೂ ಶಕ್ತಿಗಳನ್ನೂ ಮಾತೃಕೆಯರೆಂದು ಪರಿಗಣಿಸಿ ಒಂದೊಂದಕ್ಕೂ ವಿಶಿಷ್ಟ ರೂಪವನ್ನು ಮೂಡಿಸಿಟ್ಟ ಪದ್ಧತಿ ಪ್ರಾಚೀನವಾದುದು. ಪುರಾಣಗಳು ಬೇರೆ ಬೇರೆ ದೇವತೆಗಳ ಶಕ್ತಿಗಳು ಈ ಮಾತೃಕೆಯರೆಂದು ವಿವರಿಸಿವೆ. ಶಿವನು ಅಂಧಕಾಸುರನನ್ನು ಸಂಹರಿಸಿದ ಸಂದರ್ಭದಲ್ಲಿ ಅವನ ಬಾಯಿಂದ ಹೊರಹೊರಟ ಜ್ವಾಲೆಯು ಯೋಗೇಶ್ವರಿಶಕ್ತಿಯಾಗಿ ಪರಿಣಮಿಸಿತಂತೆ; ಅದೇ ಸಂದರ್ಭದಲ್ಲಿ ಬ್ರಹ್ಮನಿಂದ ಬ್ರಹ್ಮಾಣೀ, ವಿಷ್ಣುವಿನಿಂದ ವೈಷ್ಣವೀ, ಪಾರ್ವತಿಯಿಂದ ಚಾಮುಂಡಾ, ಇಂದ್ರನಿಂದ ಇಂದ್ರಾಣೀ, ವರಾಹನಿಂದ ವಾರಾಹೀ, ಕುಮಾರನಿಂದ ಕೌಮಾರೀ, ಮಹೇಶ್ವರನಿಂದ ಮಾಹೇಶ್ವರೀ—ಹೀಗೆ ಏಳು ಶಕ್ತಿಯರು ಕಾಣಿಸಿಕೊಂಡರಂತೆ. ಇವರೇ ಸಪ್ತಮಾತೃಕೆಯರು. ಇವರೆಲ್ಲರ ನಾಯಕಿ ಯೋಗೇಶ್ವರೀ.

ಮಹಾಭಾರತದಲ್ಲಿ ಈ ಸಪ್ತಮಾತೃಕೆಯರು ಸ್ಕಂದನನ್ನು ಸಾಕಿದ ತಾಯಿಯರೆಂಬ ಪ್ರಸ್ತಾಪ ಬರುತ್ತದೆ. ಆದರೆ ಇದೇನು ಪ್ರಾಚೀನ ಕಲ್ಪನೆಯಲ್ಲ. ಸುಬ್ರಹ್ಮಣ್ಯನ ಪೂಜೆಗೂ ಸಪ್ತಮಾತೃಕೆಯರಿಗೂ ಅಷ್ಟಾಗಿ ಸಂಬಂಧವಿರದು. ಆದರೂ ಮಕ್ಕಳನ್ನು ರೋಗಗಳಿಂದ ಬಿಡಿಸಿ, ಬಾಲಪೀಡೆಗಳನ್ನು ಪರಿಹಾರ ಮಾಡುವವರು ಈ ಮಾತೃಕೆಯರೇ ಎನ್ನುವ ಉಲ್ಲೇಖವನ್ನು ಹರಿವಂಶದಲ್ಲಿ ಕಾಣಬಹುದು. ಅರ್ಭಕಗ್ರಹಗಳನ್ನು ನಿವಾರಿಸಲು ಮಾತೃಕಾಪೂಜೆ ಮಾಡುವ ಪದ್ಧತಿಯೂ ಇದೆ.

ಸಪ್ತಮಾತೃಕೆಯರಿಗೂ ಗಣಪತಿಗೂ ಹಿಂದಿನ ಕಾಲದಿಂದ ನಂಟು. ಶೈವಾಲಯಗಳಲ್ಲಿ ಸಪ್ತಮಾತೃಕೆಯರೊಂದಿಗೆ ಗಣೇಶನನ್ನೂ ಕೂರಿಸಿ ಪೂಜಿಸುವುದು ವಾಡಿಕೆ. ಸಪ್ತಮಾತೃಕೆಯರ ಮೂರ್ತಿಗಳಿದ್ದಲ್ಲಿ ಗಣೇಶನ ಮೂರ್ತಿಯೂ ಇರಲೇಬೇಕೆಂಬ ನಿಯಮವಿದೆ. ಸಾಮಾನ್ಯವಾಗಿ ಈ ಮಾತೃಕಾಗೋಷ್ಠಿಯಲ್ಲಿ ಗಣೇಶನ ಸ್ಥಾನವು ಚಾಮುಂಡಿಯ ಪಕ್ಕದಲ್ಲಿ, ಚಾಮುಂಡಿಯು ಗೌರಿಯ ವಿಶೇಷಾಂಶವನ್ನು ಹೊತ್ತವಳು. ಹೀಗೆ ಗೌರಿಗೂ ಗಣೇಶನಿಗೂ ನಿಕಟವಾದ ನಂಟು ಸ್ಮೃತಿಗಳ ಕಾಲದಿಂದ ಬೆಳೆದು ಬಂದಿದೆ. ಸಪ್ತಮಾತೃಕೆಯರು ಗಣಪತಿಯ ಶಕ್ತಿಯರೇ ಎಂದು ಕೆಲವು ಗ್ರಂಥಗಳು ಬಣ್ಣಿಸುತ್ತವೆ.

ನಮ್ಮಲ್ಲಿ ಬಹುವಾಗಿ ಬಳಕೆಯಲ್ಲಿ ಬರುವ ಒಂದು ಕಥೆಯು ಗೌರೀ-ಗಣಪತಿಯರ ಬಾಂಧವ್ಯವನ್ನು ಸ್ಪಷ್ಟಗೊಳಿಸುತ್ತದೆ. ಶಿವಪುರಾಣದ ರುದ್ರಸಂಹಿತೆಯಲ್ಲಿ ಬರುವ ಈ ಕಥೆಯು ಎಲ್ಲರಿಗೂ ತಿಳಿದಿದೆ. ಅಂಬಿಕೆಯು ಸ್ನಾನದ ಮನೆಯಲ್ಲಿದ್ದಾಗ ತನ್ನ ಮೈಮಣ್ಣಿನಿಂದ ಮೂರ್ತಿಯೊಂದನ್ನು ಮಾಡಿ, ಅದಕ್ಕೆ ಜೀವಕಳೆಯನ್ನು ತುಂಬಿ, ಅದನ್ನು ಬಾಗಿಲು ಕಾಯಲು ನಿಲ್ಲಿಸಿದಳಂತೆ. ಒಳಗೆ ಬರಲೆಣಿಸಿದ ಶಿವನನ್ನು ಈ ಪಾರ್ಥಿವಶಿಶು ತಡೆಯಿತಂತೆ. ತಾಯಿಯ ಏಕಾಂತವನ್ನು ರಕ್ಷಿಸಲು ತಂದೆಯೊಂದಿಗೇ ಕಾದಾಡಿದ ವೀರಪುತ್ರ ಇವನು ಎಂದು ಕಥೆಯ ಸಾರಾಂಶ. ಶಿವನು ಈ ಶಿಶುವನ್ನು ಸಂಹರಿಸಲು ಗೌರಿಯು ತನ್ನ ಮಾತೃಗಣಗಳನ್ನು ಕೂಡಿಕೊಂಡು ಶಿವಗಣಗಳನ್ನೇ ಸೆಣಸಿದಳಂತೆ. ಇಲ್ಲಿ ಗೌರಿಯೇ ಪ್ರಬಲಶಕ್ತಿಯಾಗಿ ಕಾಣಿಸಿಕೊಳ್ಳುತ್ತಾಳೆ. ವಿಷ್ಣು ಮೊದಲಾದ

ಇತರ ದೇವತೆಗಳು ಅವಳನ್ನು ಸಮಾಧಾನಗೊಳಿಸಲು ಯತ್ನಿಸುತ್ತಾರೆ. ಆಗ ಶಿವನ ವರದಿಂದ ಗಜಮುಖನಾಗಿ, ಗಣನಾಥನಾಗಿ ಶಿಶುವು ಮತ್ತೆ ಜೀವತಳೆಯುತ್ತದೆ.

ಲಿಂಗಪುರಾಣದಲ್ಲಿಯೂ ಸ್ಕಂದಪುರಾಣದಲ್ಲಿಯೂ ಹೀಗೆಯೇ ಗಣಪತಿಯು ಗೌರಿಯ ಪ್ರಿಯಪುತ್ರನಾಗಿ ಕಾಣಿಸಿಕೊಳ್ಳುತ್ತಾನೆ. ಗೌರೀಶಂಕರರಿಗೆ ಗಣಪತಿಯೇ ಹಿರಿಯ ಮಗನೆಂದೂ, ಕುಮಾರ (ಸ್ಕಂದ ಅಥವಾ ಸುಬ್ರಹ್ಮಣ್ಯ)ನು ಕಿರಿಯವನೆಂದೂ ಕಲ್ಪನೆಯಿದೆಯಷ್ಟೆ. ಆದರೆ ಬಹುಕಾಲದವರೆಗೆ ಗೌರೀಶಂಕರರ ಮಗನು ಸ್ಕಂದ ಅಥವಾ ಕಾರ್ತಿಕೇಯನೊಬ್ಬನೇ ಎನ್ನುವ ಭಾವನೆಯಿದ್ದಂತೆ ತಿಳಿದುಬರುತ್ತದೆ. ಕಾಳಿದಾಸನ ಕಾಲದಲ್ಲಿಯೂ ಗಣೇಶನು ಗುಹಾಗ್ರಜನೆಂದಾಗಲೀ ಗೌರೀಪುತ್ರನೆಂದಾಗಲೀ ಬಲವಾದ ನಂಬಿಕೆಯಿರಲಿಲ್ಲ. ಅಷ್ಟು ಮಾತ್ರವಲ್ಲ, ಕುಮಾರಸಂಭವದ ಸಂದರ್ಭದಲ್ಲಿ ಸಪ್ತಮಾತೃಕೆಯರ ನೆರವುಂಟು. ಇದು ಗಣೇಶ-ಕಾರ್ತಿಕೇಯ ಇವರ ಸಂಬಂಧವನ್ನು ಇನ್ನಷ್ಟು ಜಟಿಲವಾಗಿಸಿದೆ.

ಗೌರೀ-ಗಣೇಶ ಇವರ ನಡುವೆ ಇರುವ ಅಪ್ರಾಕೃತವಾದ ಪ್ರಾಕೃತವಾದ ಸಂಬಂಧದ ವಿಚಾರವಾಗಿ ಕೆಲವು ಕಥೆಗಳಿವೆ. ಅವುಗಳಲ್ಲಿ ಒಂದು ಗಣೇಶನ 'ಮದುವೆ'ಗೆ ಸಂಬಂಧಿಸಿದ್ದು. ನಮ್ಮ ನಾಣ್ನುಡಿಯಲ್ಲಿ 'ಗಣೇಶನ ಮದುವೆ'ಯೆಂದರೆ ಅಸಾಧ್ಯವಾದ ಕೆಲಸವೆಂದಷ್ಟೆ. ಗಣೇಶನು ಪ್ರಾಪ್ತವಯಸ್ಕನಾದಾಗ ಗೌರಿಯು ಅವನಿಗೆ ಮದುವೆ ಮಾಡುವ ಮನಸ್ಸು ಮಾಡಿದಳಂತೆ. ಆಕೆ ತೋರಿಸಿದ ಹೆಣ್ಣುಗಳಲ್ಲಿ ಒಂದನ್ನೂ ಗಣೇಶನು ಒಪ್ಪಲಿಲ್ಲ. ತನ್ನ ತಾಯಿಯ ಲಕ್ಷಣಗಳನ್ನೇ ಉಳ್ಳ ಹೆಣ್ಣು ದೊರೆತರೆ ಮದುವೆಯಾಗುವೆನೆಂದು ಹಟ ಹಿಡಿದನಂತೆ. ಅದ್ವಿತೀಯಳಾದ ಲೋಕಮಾತೆಯಂಥ ಹೆಣ್ಣು ಸಿಗುವುದು ಹೇಗೆ? ಹೀಗಾಗಿ ಗಣೇಶನು ಮದುವೆಯಿಲ್ಲದೆ ಉಳಿದನಂತೆ. ಮದುವೆಯಿಲ್ಲದೆ ನಿಂತಿರುವ ಕನ್ಯಾ ಕುಮಾರಿಗೂ ಗಣೇಶನಿಗೂ ಗಂಟು ಹಾಕುವ ಕಥೆಗಳಿವೆ. ಕನ್ಯಾಕುಮಾರಿಯು ಪಾರ್ವತಿಯ ಅಂಶ ಸಂಭೂತೆಯಷ್ಟೆ. ಈ ಪ್ರವೃತ್ತಿಯು ಮನೋವಿಶ್ಲೇಷಣದ ಪರಿಭಾಷೆಯಲ್ಲಿ ಸ್ವಮಾತೃಗತ–ಲೈಂಗಿಕಪ್ರವೃತ್ತಿ(mother fixation) ಎನಿಸಿಕೊಳ್ಳುತ್ತದೆ. ಮಗನಿಗೆ ತಾಯಿಯ ಮೇಲೆ ಅನುರಕ್ತಿ, ತಾಯಿಗೆ ಮಗನ

ಮೇಲೆ ವ್ಯಾಮೋಹ—ಇದು ಜಟಿಲವಾದ ಕಾಮನೆಯಾಗಿ ಪರಿಣಮಿಸಬಹುದೆಂದು ಮನಃಶಾಸ್ತ್ರಜ್ಞರ ತರ್ಕ. ಗಣಪತಿಯ ಪುರಾಣವನ್ನು ಫ್ರಾಯ್ಡನ ಸಿದ್ಧಾಂತಗಳಿಗೆ ಅನುಗುಣವಾಗಿ ಎಳೆಯುವುದು ಸಾಧ್ಯ. ಆದರೆ ಇದು ಬೇರೆಯ ಮಾತು, ಇಲ್ಲಿ ಅಪ್ರಕೃತ.

# ಗಣಪತಿಯ ಶಕ್ತಿ

ಪೂಜೆಯನ್ನು ಮಾಡುವಾಗ ಗಣಪತಿಯನ್ನು ವಟು, ಬ್ರಹ್ಮಚಾರಿ, ಪತ್ನೀಹೀನ ಎಂದು ಮುಂತಾಗಿ ಸಂಬೋಧಿಸುತ್ತೇವೆ. ಆದರೆ ಅವನಿಗೆ ಮದುವೆಯ ಮನಸ್ಸು ಇದೆಯೆಂದು ಸೂಚಿಸಲು ಶೃಂಗಾರಿ, ಕಾಮುಕ ಎಂದೂ ಕರೆಯುತ್ತೇವೆ. ಪ್ರತಿಯೊಂದು ಪುರುಷದೇವತೆಗೂ ಒಂದೊಂದು ಶಕ್ತಿ (ಸ್ತ್ರೀದೇವತೆ) ಇರುವುದು ವಾಡಿಕೆ. ಬ್ರಹ್ಮನಿಗೆ ಭಾರತಿ, ವಿಷ್ಣುವಿಗೆ ಲಕ್ಷ್ಮಿ, ಶಿವನಿಗೆ ಗೌರಿ, ಹೀಗೆ. ಸಾಮಾನ್ಯವಾಗಿ ಗಣಪತಿಯನ್ನು ಏಕಮೂರ್ತಿಯಂತೆ ಪರಿಗಣಿಸಿದರೂ ಗಣಪತಿಯು ಶಕ್ತಿಯನ್ನು ಎಡತೊಡೆಯ ಮೇಲೆ ಕೂಡಿಸಿಕೊಂಡು ಅವಳನ್ನು ಆಲಂಗಿಸಿರುವಂತೆ ಶಿಲ್ಪಗಳಿವೆ; ಸಿದ್ಧಿ-ಬುದ್ಧಿಯರೆಂಬ ಇಬ್ಬರು ಹೆಂಗಳೆಯರೊಡನೆ ಕೂತಿರುವ ಗಣಪತಿಶಿಲ್ಪಗಳಿವೆ.

ಶಕ್ತಿಸಹಿತನಾದ ಗಣಪತಿಯನ್ನು ಮಹಾಗಣಪತಿ, ಅಥವಾ ಲಕ್ಷ್ಮೀಗಣಪತಿ ಎಂದು ಕರೆಯುತ್ತಾರೆ. ದಕ್ಷಿಣ ಹಿಂದುಸ್ಥಾನದ ಶೈವದೇವಾಲಯಗಳಲ್ಲಿ ಉಚ್ಛಿಷ್ಟಗಣಪತಿ ಎನಿಸಿಕೊಳ್ಳುವ ಮೂರ್ತಿಯನ್ನು ಕಾಣಬಹುದು. ಎಡತೊಡೆಯ ಮೇಲೆ ಕುಳಿತಿರುವ ದೇವಿ ಪುಷ್ಟಿ; ಆಕೆಯ ಗುಹ್ಯಸ್ಥಾನವನ್ನು ಗಣಪತಿಯ ಸೊಂಡಿಲು ಮುಟ್ಟಿರುತ್ತದೆ; ಆಕೆ ಗಣಪತಿಯ ಗುಹ್ಯೇಂದ್ರಿಯವನ್ನು ತನ್ನ ಬಲಗೈಯಿಂದ ಹಿಡಿದಿರುತ್ತಾಳೆ. ಇದು ತಾಂತ್ರಿಕಪಂಥದವರ ಮೂರ್ತಿ. ಇಲ್ಲಿ ಕಾಣುವ ಅಶ್ಲೀಲತೆಗೆ ತಾಂತ್ರಿಕ ಅರ್ಥವುಂಟು. ದೇವೀಸಹಿತನಾದ ಗಣಪತಿಯು ಒಂದು ಕೈಯಲ್ಲಿ ಮದ್ಯ ಪಾತ್ರೆಯನ್ನು ಹಿಡಿದಿರುವುದೂ ಉಂಟು; ಇದು ಪುಷ್ಕರಗಣಪತಿಯೆನಿಸಿಕೊಳ್ಳುತ್ತದೆ.

ಇಬ್ಬರು ದೇವಿಯರೊಡನೆ ಗಣಪತಿಯಿದ್ದಾಗ ಅವರು ಸಿದ್ಧಿ ಮತ್ತು ಬುದ್ಧಿ ಎನಿಸಿಕೊಳ್ಳುತ್ತಾರೆ. ಸಿದ್ಧಿ-ಬುದ್ಧಿಯರು ಬ್ರಹ್ಮನ ಮಕ್ಕಳಂತೆ. ಗಣಪತಿಗೆ ಸಿದ್ಧಿಯಲ್ಲಿ ಲಕ್ಷ್ಯ ಎಂಬ ಮಗನೂ, ಬುದ್ಧಿಯಲ್ಲಿ ಲಾಭ ಎಂಬ ಮಗನೂ ಹುಟ್ಟಿದರಂತೆ. ಇದು ಸಂಕೇತಪ್ರಧಾನವಾದ ಕಲ್ಪನೆ. ಕೆಲಸವು ಕೈಗೂಡುವುದು ಸಿದ್ಧಿ; ಅದರ ಒಡಲಿಂದ ಮೂಡಿಬರುವುದು ಗುರಿ, ಧ್ಯೇಯ, ಪುರುಷಾರ್ಥ (ಇದೇ ಲಕ್ಷ್ಯ). ಕೆಲಸವು ಕೈಗೂಡಲು ಅಗತ್ಯವಾದುದು ಬುದ್ಧಿ ಎಂದರೆ ತಿಳಿವಳಿಕೆ; ಇದರಿಂದ ಹೊರಬರುವುದು ಲಾಭ, ಗಳಿಕೆ. ಗಣೇಶನ ಕಲ್ಪನೆಯಲ್ಲಿ ಈ ವ್ಯವಹಾರಧರ್ಮದ ಸಂಕೇತವನ್ನು ಕಾಣಬಹುದು.

ಅಷ್ಟಮಹಿಷೀಯುಕ್ತ ಗಣಪತಿಯೂ ಉಂಟು. ಎಂಟು ಮಂದಿ ಹೆಂಗಳೆಯರು ಗಣಪತಿಯ ಸುತ್ತ ಇರುವಂತೆ ಚಿತ್ರಿಸುವ ಪದ್ಧತಿಯಿದೆ. ಇವರು ಅಷ್ಟಸಿದ್ಧಿಗಳ ಮೂರ್ತರೂಪವಷ್ಟೆ. ಅಣಿಮಾ, ಮಹಿಮಾ, ಗರಿಮಾ, ಲಘೀಮಾ, ಪ್ರಾಪ್ತಿ, ಪ್ರಾಕಾಮ್ಯ, ಈಶತ್ವ ಮತ್ತು ವಶಿತ್ವ—ಈ ಎಂಟು ಯೋಗಸಿದ್ಧಿಗಳಿಗೆ ನಾಯಕನಾಗಿ ಗಣಪತಿ ನಿಲ್ಲುತ್ತಾನೆ. ಕೆಲವು ಗ್ರಂಥಗಳಲ್ಲಿ ಯೋಗೇಶ್ವರಿಯೂ ಸಪ್ತಮಾತೃಕೆಯರೂ ಸೇರಿ ಗಣಪತಿಯ ಅಷ್ಟಮಹಿಷಿಯರೆನ್ನುವ ವಿವರಣೆಯಿದೆ. ಸಪ್ತಮಾತೃಕೆಯರು ಗಣಪತಿಯ ಶಕ್ತಿಯರೆನ್ನುವ ಕಲ್ಪನೆಯು ಪ್ರಾಚೀನವಾದುದು. ಇದರ ಪ್ರಸ್ತಾಪ ಹಿಂದೆಯೇ ಬಂದಿದೆ.

ಗಣೇಶನ ಶಕ್ತಿಯನ್ನೇ ಸ್ವತಂತ್ರವಾಗಿ ಚಿತ್ರಿಸಿದಾಗ ಗಣೇಶಾನಿ ಕಾಣಿಸಿಕೊಳ್ಳುತ್ತಾಳೆ. ಗಣೇಶಾನಿಯು ಗಣೇಶನ ಸ್ತ್ರೀರೂಪ, ಗಣೇಶಶಕ್ತಿ. ಇದು ನಮ್ಮ ಶಿಲ್ಪದಲ್ಲಿ ಅಷ್ಟಾಗಿ ಮೂಡಿಬಂದಿಲ್ಲ. ಜಬಲ್‌ಪುರದ ಬಳಿಯಿರುವ ಭೇರಾಘಾಟಿಯ ಗೌರೀಶಂಕರದಲ್ಲಿ ಸೊಗಸಾದ ಗಣೇಶಾನಿಯ ಶಿಲ್ಪವೊಂದಿದೆ. ಇದರಲ್ಲಿ ಗಜಮುಖವಿದ್ದರೂ ಮಹೋದರವಿಲ್ಲ, ಸ್ಪಷ್ಟವಾದ ಸ್ತನಗಳಿವೆ; ನಾಲ್ಕು ಕೈಗಳಿವೆ; ಆದರೆ ಆಯುಧಗಳಾಗಲೀ ಮುದ್ರೆಗಳಾಗಲೀ ಉಳಿದಿಲ್ಲ. ಪೀಠಪ್ರಾಂತದಲ್ಲಿ ದ್ವಿಭುಜ-ಗಜಮುಖ ಮೂರ್ತಿಯೊಂದಿದೆ. ಎಡಗೈಯಿಂದ ಗಣೇಶಾನಿಯ ತೊಡೆಯನ್ನು ಎತ್ತಿ ಹಿಂಡಿದಂತೆ ಚಿತ್ರಿತವಾಗಿದೆ. ಇದು ಬಹುಶಃ ಗಣಗಳಲ್ಲಿ ಒಬ್ಬನ ಶಿಲ್ಪ. ಈ ದೇವಾಲಯವು ಅರವತ್ತು-ನಾಲ್ಕು ಯೋಗಿನಿಯರಿಗಾಗಿ ನಿರ್ಮಿತವಾದುದು;

ಹತ್ತನೆಯ ಶತಮಾನದ್ದೆಂದು ಹೇಳುತ್ತಾರೆ. ದಕ್ಷಿಣದಲ್ಲಿ ವ್ಯಾಘ್ರಪಾದ-ಗಣೇಶಾನಿಯ ಮತ್ತೊಂದು ಶಿಲ್ಪ ಉಪಲಬ್ಧವಿದೆ. ಟಿಬೆಟ್‌ನಲ್ಲಿ ಮಹಾಕಾಲನು ತನ್ನ ಒಂದು ಕಾಲಿನಿಂದ ಗಣೇಶನನ್ನೂ ಮತ್ತೊಂದು ಕಾಲಿನಿಂದ ಗಣೇಶಾನಿಯನ್ನೂ ಮೆಟ್ಟಿನಿಂತಂತೆ ಚಿತ್ರಿಸುತ್ತಾರೆ.

# ವಿದ್ಯಾಗಣಪ

ಗಣಪತಿಯು ವಿದ್ಯಾಭಿಮಾನಿದೇವತೆಯೆಂದು ಪ್ರಸಿದ್ಧನಷ್ಟೆ. ಮಗುವಿಗೆ ಅಕ್ಷರಾಭ್ಯಾಸವನ್ನು ಮಾಡಿಸುವಾಗ ಗಣೇಶನ ಪೂಜೆ ಮಾಡಿಸುತ್ತಾರೆ. ಹಿಂದಿನ ಕಾಲದಲ್ಲಿ, ಎಂದರೆ ಸ್ಮೃತಿಗಳ ಕಾಲದಲ್ಲಿ, ಗಣಪತಿಗೂ ವಿದ್ಯೆಗೂ ಯಾವ ಸಂಬಂಧವೂ ಇದ್ದಂತೆ ಕಂಡುಬರುವುದಿಲ್ಲ. ಈ ಸಂಬಂಧವು ಮುಂದಿನ ಯುಗದಲ್ಲಿ ಹೇಗೆ ಒದಗಿ ಬಂದಿತೆಂಬುದೂ ಸ್ಪಷ್ಟವಾಗಿಲ್ಲ. ಬೃಹಸ್ಪತಿಯು ಗಣಪತಿಯೆನ್ನುವ ವ್ಯವಹಾರ ಈ ಸಂಬಂಧಕ್ಕೆ ಮೂಲವೆಂದು ಕೆಲವರ ವಾದ; ಬೃಹಸ್ಪತಿಯು ದೇವತೆಗಳ ಗುರುವಷ್ಟೆ. ಬೃಹಸ್ಪತಿಯೆಂದರೂ ಗಣಪತಿಯೆಂದರೂ ವೈದಿಕಮಂತ್ರಗಳಿಗೆ ಒಡೆಯ, ಮಂತ್ರಗಳ ಮೂರ್ತಸ್ವರೂಪ. ವೈಯಾಕರಣಿಗಳಿಗೆ ಗಣಪಾಠದ ಪರಿಚಯವಿದೆ.

ಸಂಸ್ಕೃತವರ್ಣಮಾಲೆಗೆ 'ಸಿದ್ಧಂ' ಎನ್ನುವ ಹೆಸರಿದ್ದಿತು. ಇದು ಸಿದ್ಧಿಯ ಸೂಚಕ, ಮೌಲ್ಯದ ಮಾತು. ಪತಂಜಲಿಯು ಇದನ್ನು ಪ್ರಮಾಣವೆನ್ನುವ ಅರ್ಥದಲ್ಲಿ ಉಪಯೋಗಿಸಿದ್ದಾನೆಂದು ಕೆಲವರ ಊಹೆ. ಇದು ಹೇಗಾದರೂ, ಪಾಠ ಕಲಿಯುವ ಮಕ್ಕಳು 'ಓಂ ನಮಃ ಸಿದ್ಧಂ' ಎಂದು ಹೇಳುವ ಪದ್ಧತಿ ಒಂದು ಕಾಲಕ್ಕೆ ಇದ್ದಿತು. ಇದು ಬರುಬರುತ್ತ ಬಾಲಭಾಷೆಯಲ್ಲಿ 'ಓನಾಮಾಸೀದ'ವಾಗಿ ಪರಿಣಮಿಸಿತು. ಶಾಸನಗಳನ್ನು ಬರೆಯುವ ಲಿಪಿಕಾರರೂ 'ಸಿದ್ಧ' ಎಂದು ಸಂಕೇತದಲ್ಲಿಯೋ ಬರೆದೇ ಶಾಸನವನ್ನು ಬರೆಯಲು ಉಪಕ್ರಮಿಸುತ್ತಿದ್ದರು. ಈ 'ಸಿದ್ಧಂ' (ಅಥವಾ 'ಸ್ವಸ್ತಿ') ಎನ್ನುವುದರ ಸಂಕೇತವೇ ಮುಂದೆ ಗಣಪತಿಯಂತ್ರವಾಗಿ ಮೈದಳೆಯಿತು. ಸ್ವಸ್ತಿಕಕ್ಕೂ ಗಣಪತಿಗೂ ಸಂಬಂಧ ಒದಗಿದುದು ಹೀಗೆಯೇ. ಸಿದ್ಧಿಯು ಗಣಪತಿಯ ಶಕ್ತಿಯೆನ್ನುವ ಕಲ್ಪನೆಯೂ ಈ ಸಂದರ್ಭದಲ್ಲಿ ಸ್ವಾರಸ್ಯವಾದುದು.

ವ್ಯಾಸನಿಗೆ ಗಣಪತಿಯು ಲಿಪಿಕಾರನಾಗಿ ಮಹಾಭಾರತವನ್ನು ಸಿದ್ಧಪಡಿಸಿದ ಕಥೆಯನ್ನು ಎಲ್ಲರೂ ಬಲ್ಲರಷ್ಟೆ. ಮಹಾಭಾರತದ ಆದಿಪರ್ವದಲ್ಲಿಯೇ ಈ ಪ್ರಸಂಗವು ನಿರೂಪಿತವಾಗಿದೆ; ಆದರೆ ಇದು ಪ್ರಕ್ಷಿಪ್ತವಾದ ಭಾಗವೆಂದು ತಜ್ಞರ ಎಣಿಕೆ. ಒಂಬತ್ತನೆಯ ಶತಮಾನದ ರಾಜಶೇಖರಕವಿಯು ಬರೆದ ಬಾಲಭಾರತವೇ ಈ ಕಥೆಗೆ ಆಕರವೆಂದು ಹೇಳುತ್ತಾರೆ. ಹತ್ತನೆಯ ಶತಮಾನದಲ್ಲಿ ನಮ್ಮ ದೇಶಕ್ಕೆ ಬಂದಿದ್ದ ಆಲ್-ಬೆರೂನಿ ಈ ಕಥೆಯನ್ನು ಕೇಳಿದ್ದನು. ಅಲ್ಲಿಂದ ಮುಂದೆ ಈ ಕಥೆ ವಿಶೇಷವಾಗಿ ಬಳಕೆಗೆ ಬಂದಿತು, ವರ್ಣಚಿತ್ರಗಳಲ್ಲಿ ಮೂಡಿಬಂದಿತು. ಕಂಬೋಡಿಯಾದೇಶದ ದ್ವಿಭುಜ-ಗಣಪತಿಯ ಶಿಲ್ಪವು ಒಂದು ಕೈಯಲ್ಲಿ ಲೇಖನಿಯನ್ನೂ ಮತ್ತೊಂದರಲ್ಲಿ ಪುಸ್ತಕವನ್ನೂ ಹಿಡಿದು ಬರೆಯಲು ಹೊರಟಂತೆ ರೂಪ ತಳೆದಿದೆ. ಗಣಪತಿಯ ವಿದ್ಯಾಪಕ್ಷಪಾತ ಇಲ್ಲಿಯೂ ಧ್ವನಿತವಾಗಿದೆ.

# ಗಣಪತಿತತ್ತ್ವ

ಯೋಗದಲ್ಲಿಯೂ ತಂತ್ರದಲ್ಲಿಯೂ ಗಣಪತಿಯು ಕಾಣಿಸಿಕೊಳ್ಳುತ್ತಾನೆ. ಸ್ವಸ್ತಿಕವು ಗಣಪತಿಯ ಸಂಕೇತವೆನ್ನುವ ಮಾತು ಬಂದಿತಷ್ಟೆ. ಸ್ವಸ್ತಿಕದ ಆಕಾರ ಚತುಷ್ಕೋಣ. 'ಷಟ್‌ಚಕ್ರನಿರೂಪಣೆ'ಯ ಪ್ರಕಾರ ಚತುಷ್ಕೋಣವಾಗಿರುವ ಚಕ್ರವು ಮೂಲಾಧಾರ. ಮೂಲಾಧಾರಚಕ್ರವೇ ಗಣಪತಿಯ ಸ್ಥಾನವೆಂದು ಪ್ರತೀತಿ. ನಮ್ಮ ಆರು ಚಕ್ರಗಳಲ್ಲಿ ಒಂದೊಂದಕ್ಕೂ ಒಬ್ಬೊಬ್ಬ ದೇವತೆ; ಮೂಲಾಧಾರಕ್ಕೆ ಗಣಪತಿ.

ಗಣೇಶ್ವರೋ ವಿಧಿರ್ವಿಷ್ಣುಃ
ಶಿವೋ ಜೀವೋ ಗುರುಸ್ಥಥಾ ।
ಷಡೇತೇ ಹಂಸತಾಮೇತ್ಯ
ಮೂಲಾಧಾರಾದಿಷು ಸ್ಥಿತಾಃ ॥

ಎನ್ನುವ ಮಂತ್ರವಿದೆ. ಮುತ್ತುಸ್ವಾಮಿ ದೀಕ್ಷಿತರು ಹೀಗೆಂದೇ ವಾತಾಪಿ ಗಣಪತಿಯನ್ನು 'ಮೂಲಾಧಾರಕ್ಷೇತ್ರಸ್ಥಿತ'ನೆಂದು ಬಣ್ಣಿಸಿದರು.

ಮೂಲಾಧಾರವು ಭೂತತತ್ತ್ವದ ಕೇಂದ್ರ. ಈ ಕಾರಣದಿಂದಲೇ ಗಣಪತಿಮೂರ್ತಿಯನ್ನು ಮಣ್ಣಿನಲ್ಲಿ ಮಾಡಿ ಪೂಜಿಸಬೇಕೆನ್ನುವ ವಿಧಿಯಿರುವುದು. ಸ್ವರ್ಣಗಣಪತಿಗಿಂತ ಮೃಣ್ಮಯಗಣಪತಿಯೇ ಹೆಚ್ಚು ಪ್ರಭಾವಶಾಲಿಯೆಂದು ಕಲ್ಪನೆ. ಹೀಗೆ ಭೂತತತ್ತ್ವವೇ ಶರೀರವಾಗಿ ಉಳ್ಳ ಗಣಪತಿಯ ಡೊಂಕು ಸೊಂಡಿಲು (ವಕ್ರತುಂಡ) ಪ್ರಣವಸ್ವರೂಪ ಅಥವಾ ಓಂಕಾರವೆಂದು ಪರಿಗಣಿಸುತ್ತಾರೆ. ತಮಿಳು ಮತ್ತು ದೇವನಾಗರಿ ಓಂಕಾರದ ಲಿಪಿಯಲ್ಲಿ ಗಣಪತಿಯನ್ನು ಮೂಡಿಸುವುದು ವಾಡಿಕೆ.

ಮೂಲಾಧಾರಚಕ್ರದ ದಳಗಳು ಕೆಂಪುಬಣ್ಣದವೆಂದು ತಾಂತ್ರಿಕ ಪರಿಭಾಷೆ. ಈ ಕಾರಣದಿಂದಲೇ ಗಣಪತಿಯ ಮೈಬಣ್ಣ ಕೆಂಪೆನ್ನುವ ಕಲ್ಪನೆಯಿದೆ. ಗಣಪತಿಯ ಧ್ಯಾನಶ್ಲೋಕವೊಂದು ಗಣಪತಿಯು ಕುಂಕುಮದಂತೆ ಕೆಂಪೆಂದೂ, ಕೆಂಪುಬಣ್ಣದ ಬಟ್ಟೆಯನ್ನುಟ್ಟು, ಕೆಂಪು ಅಂಗರಾಗವನ್ನು ಮೈಗೆಲ್ಲ ಬಳಿದುಕೊಂಡಿರುವನೆಂದೂ ಬಣ್ಣಿಸುತ್ತದೆ. ಮತ್ತೊಂದು ಧ್ಯಾನಶ್ಲೋಕವು ಕೆಂಪುಬಣ್ಣದ ಕಮಲದ ಮೇಲೆ ಕುಳಿತವನೆಂದು 'ರಕ್ತಪದ್ಮೋಪವಿಷ್ಟ' ಬಣ್ಣಿಸುತ್ತದೆ. 'ಶಾರದಾತಿಲಕತಂತ್ರ'ವು ಗಣಪತಿಯನ್ನು 'ಕೃತಾಂಗರಾಂ ನವಕುಂಕುಮೇನ' ಎಂದು ನಿರೂಪಿಸುತ್ತದೆ. ಮಹಾಗಣಪತಿಯು ಅರುಣಚ್ಛಾಯೆಯವನಂತೆ; ಪುಷ್ಕರಗಣಪತಿಯು 'ಸಿಂದೂರಾಭನಿಭಾನನ'ನಂತೆ.

ಗಣಪತಿಯ ಬೀಜಮಂತ್ರವು 'ಗಮ್' ಎಂಬುದು. 'ಭೂತಡಾಮರತಂತ್ರ'ವು ಬಿಂದುವುಳ್ಳ ಗಕಾರವೇ ಗಣೇಶಬೀಜವೆಂದು ('ಗಕಾರೋ ಬಿಂದುಮಾನ್ ವಿಘ್ನರಾಜಂ ಗಣೇಶಬೀಜಕಂ') ಹೇಳುತ್ತದೆ. ಈ ಬೀಜಮಂತ್ರದೊಂದಿಗೆ ಷಡಂಗನ್ಯಾಸ ಮಾಡುವ ವಿಧಿಯು ಹೀಗಿದೆ— "ಗಾಂ ಅಂಗುಷ್ಠಾಭ್ಯಾಂ ನಮಃ, ಗೀಂ ತರ್ಜನೀಭ್ಯಾಂ ನಮಃ, ಗೂಂ ಮಧ್ಯಮಾಭ್ಯಾಂ ನಮಃ, ಗೈಂ ಅನಾಮಿಕಾಭ್ಯಾಂ ನಮಃ, ಗೌಂ ಕನಿಷ್ಠಾಭ್ಯಾಂ ನಮಃ, ಗಃ ಕರತಲಕರಪೃಷ್ಠಾಭ್ಯಾಂ ನಮಃ". ಇದಾದನಂತರ "ಗಾಂ ಹೃದಯಾಯ ನಮಃ, ಗೀಂ ಶಿರಸೇ ಸ್ವಾಹಾ, ಗೂಂ ಶಿಖಾಯೈ ವಷಟ್, ಗೈಂ ಕವಚಾಯ ಹುಮ್, ಗೌಂ ನೇತ್ರತ್ರಯಾಯ ವೌಷಟ್, ಗಃ ಅಸ್ತ್ರಾಯ ಫಟ್" ಎನ್ನುವ ಮಂತ್ರವಿದೆ. ಇಲ್ಲಿನ ಋಷಿಯ ಹೆಸರು ಗಣಕ; ಇದರ ಛಂದಸ್ಸು ನಿವೃತ್; ಇಲ್ಲಿನ ದೇವತೆ ವಿಘ್ನದೇವತೆ; ಇದರ ವಿನಿಯೋಗವು 'ವಿಘ್ನಶಾಂತ್ಯರ್ಥಂ' ಎಂದು. ತೈಜಸಸ್ವರೂಪದ ತ್ರಿಕೋಣದ ಮಧ್ಯದಲ್ಲಿ ಗಕಾರವನ್ನು ರಚಿಸಿ ಗಣಪತಿಯನ್ನು ಆವಾಹಿಸುತ್ತಾರೆ.

ಪಂಚಭೂತಗಳಲ್ಲಿ ಪೃಥಿವೀತತ್ತ್ವವು ಚತುಷ್ಕೋಣ, ಆಪೋತತ್ತ್ವವು ವರ್ತುಲ, ತೇಜೋತತ್ತ್ವವು ತ್ರಿಕೋಣ, ವಾಯುತತ್ತ್ವವು ಅರ್ಧಚಂದ್ರ, ಆಕಾಶತತ್ತ್ವವು ಬಿಂದು ಎಂದು ಹೇಳುತ್ತಾರೆ. ಈ ಎಲ್ಲ ಸಂಕೇತಗಳ ಸಮಷ್ಟಿಯೇ ಗಣಪತಿಯ ಸ್ವರೂಪವೆಂಬ ವಿವರಣೆಯಿದೆ. ಎಂದರೆ,

ಪಂಚಭೂತಗಳನ್ನೊಳಗೊಂಡ ವಿಶಿಷ್ಟಶಕ್ತಿಯೇ ಗಣಪತಿ. ಅವನ ವಕ್ರತುಂಡವು ಎಲ್ಲ ವೇದಗಳ ನೆಲೆಯಾದ, ಎಲ್ಲ ಸಾಧನೆಗಳ ಗುರಿಯಾದ ಓಂಕಾರದ ಪ್ರತೀಕವಾದರೆ ಅವನ ಮಹೋದರವು ಬ್ರಹ್ಮಾಂಡಗರ್ಭವೇ. ಅದನ್ನು ಕಟ್ಟಿ ಹಿಡಿದಿರುವ ಸರ್ಪಾಭರಣವು ಕುಂಡಲಿನೀಶಕ್ತಿ. ಅವನ ವಾಹನವಾದ ಇಲಿಯು ರಜೋತತ್ತ್ವದ ಸಂಕೇತ. ಎಡೆಬಿಡದೆ ಸುಳಿದಾಡುವ ಇಲಿಯು ರಾತ್ರಿಯ, ತಮಸ್ಸಿನ ಪ್ರತೀಕವೂ ಹೌದು. ಈ ಎರಡೂ ಗುಣಗಳನ್ನು ಏರಿ ನಿಂತಿರುವ ಗಣಪತಿಯಲ್ಲಿ ಮೀರಿದ ಸತ್ತ್ವೋತ್ಕರ್ಷವಿದೆ. ಸಾಮಾನ್ಯವಾಗಿ ಗಣಪತಿಯು ಮೂಷಕವಾಹನ, ಆಖುರಥ. ಹೇರಂಬ-ಗಣಪತಿಯ ವಾಹನವು ಸಿಂಹ; ಈ ಗಣಪತಿಯು ಶಕ್ತಿಸ್ವರೂಪ.

ಗಣಪತಿಯು 'ಕಪಿತ್ಥಜಂಬೂಫಲಸಾರಭಕ್ಷ.' ಜಂಬೂಫಲವು ಗಣಪತಿಯ ಕೈಯಲ್ಲಿ ಪ್ರಮುಖವಾಗಿ ಕಾಣಿಸುತ್ತದೆ. ಜಂಬೂಫಲವೆಂದರೆ ಗಣಪತಿ-ಲಿಂಗ. ಕೈಯಲಿ ಹಿಡಿದಿರುವ ದಾಳಿಂಬೆಹಣ್ಣು ಬಹುಬೀಜ ಫಲವಷ್ಟೆ; ಇದು ವಿರಾಟ್ ಪ್ರಾಣಶಕ್ತಿಯ ಸಂಕೇತ, ಅನಂತವಸ್ತುವಿಶಿಷ್ಟವಾದ ಪ್ರಪಂಚದ ಸಂಕೇತ, ಅಪರಿಮಿತವಾದ ಚೈತನ್ಯದ ಪ್ರತೀಕ. ಭಾರತದಾಚೆ ಗಣಪತಿಮೂರ್ತಿಗಳ ಕೈಯಲ್ಲಿ ಚಿಂತಾಮಣಿಯನ್ನು ಕಾಣಬಹುದು. ಚಿಂತಾಮಣಿಯು ಕಾಮಿತಾರ್ಥಪ್ರದವಾದ ಮಣಿವಿಶೇಷ. ಅದರ ಗರ್ಭದಿಂದಲೇ ಪ್ರಾಣವು ಹೊರಹೊಮ್ಮುವುದೆಂದು ಕಲ್ಪನೆ.

ಗಣಪತಿಯು ಮೋದಕಪ್ರಿಯ; ಅವನಿಗೆ ನೈವೇದ್ಯ ಮೋದಕವೇ. ಶಿಲ್ಪಕೃತಿಗಳಲ್ಲಿ ಮೋದಕಹಸ್ತನಾಗಿಯೇ ಗಣಪತಿಯನ್ನು ಬಿಡಿಸುತ್ತಾರೆ. ಮೋದಕವೆಂದರೆ ಆನಂದ(ಮೋದ)ವನ್ನು ಕೊಡುವ ಶಕ್ತಿ; ಈ ಸಂಕೇತದಿಂದ ಗಣಪತಿಯು ಆನಂದಘನ. ಮೋದಕವನ್ನು ಮಹಾಬುದ್ಧಿಯ ಸಂಕೇತ ವೆಂದೂ ಪರಿಗಣಿಸುತ್ತಾರೆ. ಗಾಣಪತ್ಯರು ಮೋದಕವೇ ಪ್ರಾಣಗರ್ಭವೆಂದು ತಿಳಿದಿದ್ದರು.

ಗಣಪತಿಯು ಏಕದಂತ. ಅವನು ಆಖುವಾಹನನಾಗಿ ಹೋಗುತ್ತಿದ್ದಾಗ ಮುಂದೆ ಬಂದ ಹಾವನ್ನು ಕಂಡು ಇಲಿಯು ಹೆದರಿ ಓಡಿಹೋಯಿತೆಂದೂ,

ಕೆಳಗೆ ಬಿದ್ದ ಗಣಪತಿಯನ್ನು ನೋಡಿ ಚಂದ್ರನು ನಕ್ಕನೆಂದೂ, ಸಿಟ್ಟಿಗೆದ್ದ ಗಣಪತಿಯು ತನ್ನ ದಂತವೊಂದನ್ನೇ ಕಿತ್ತುಕೊಂಡು ಚಂದ್ರನ ಕಡೆ ಬಿಸುಟನೆಂದೂ ಕಥೆಯಿದೆ. ಪರಶುರಾಮನು ಒಮ್ಮೆ ಅವನ ದಂತಗಳಲ್ಲಿ ಒಂದನ್ನು ಕತ್ತರಿಸಿದ ಕಥೆಯ ಪ್ರಸ್ತಾಪ ಮೊದಲೇ ಬಂದಿದೆ. ಆದರೆ ಏಕದಂತವು ತಾತ್ತ್ವಿಕವಾಗಿ ಅದ್ವೈತದ ಪ್ರತೀಕ. ಭಗ್ನದಂತವನ್ನು ಕೈಯಲ್ಲಿ ಹಿಡಿದಂತೆ ಚಿತ್ರಿಸುವುದುಂಟು. ನೇಪಾಳ, ಟಿಬೆಟ್, ಜಪಾನ್ ದೇಶಗಳಲ್ಲಿ ಈ ಭಗ್ನದಂತವು ಲೇಖನಿಯಾಗಿದೆ! ಈ ಭಗ್ನದಂತವೂ ಮೋದಕದ ಮಾರ್ಪಾಟೆಂದು ಒಂದು ವಾದವಿದೆ.

ಗಣಪತಿಯ ಕೈಯಲಿರುವ ಅಂಕುಶವು ಆನೆಯನ್ನು ನಿಗ್ರಹಿಸಲು ಸಾಮಾನ್ಯವಾಗಿ ಮಾವಟಿಗರು ಬಳಸುವ ಆಯುಧವೇ. ಆದರೆ ಅಂಕುಶವು ತಾತ್ತ್ವಿಕವಾಗಿ ಜ್ಞಾನದ ಸಂಕೇತ. ಅಜ್ಞಾನವೆಂಬ ಮದಗಜವನ್ನು ದಮಿಸುವುದು ಜ್ಞಾನಾಂಕುಶ. ಬಾಣಭಟ್ಟನು ಗಣಪತಿಯ ಅಂಕುಶವನ್ನು ಎಲ್ಲ ವಿದ್ಯೆಗೂ ಸಿದ್ಧಿಗೂ ಒದಗುವ ಅಡ್ಡಿಗಳನ್ನು ಹೊರದೂಡುವ ಸಾಧನವೆಂದು ಬಣ್ಣಿಸಿದ್ದಾನೆ ('ಸರ್ವವಿದ್ಯಾಸಿದ್ಧಿವಿಘ್ನವಿನಾಯಕಾಪನಯನಾಂಕುಶೇನೇವ'). ಗಣಪತಿಯು ಹಿಡಿದಿರುವ ಪಾಶವು ಸಂಸಾರದ ಬಂಧನದ ಸಂಕೇತ.

# ಗಣಪತಿಯ ಸ್ವರೂಪ

ಯುಗಯುಗದಲ್ಲಿ ಗಣಪತಿಯ ರೂಪವು ಮಾರ್ಪಡುವುದೆಂದು ಗಣೇಶ ಪುರಾಣದ ಶ್ಲೋಕವೊಂದು ಸೂಚಿಸುತ್ತದೆ—

ಧ್ಯಾಯೇತ್ ಸಿಂಹಗತಂ ವಿನಾಯಕಮಮುಂ
ದಿಗ್ಬಾಹುಮಾದ್ಯೇ ಯುಗೇ
ತ್ರೇತಾಯಾಂ ತು ಮಯೂರವಾಹನಮಮುಂ
ಷಡ್ಬಾಹುಕಂ ಸಿದ್ಧಿದಂ ।
ದ್ವಾಪರೇತು ಗಜಾನನಂ ಯುಗ ಭುಜಂ
ರಕ್ತಾಂಗರಾಗಂ ವಿಭುಂ
ತುರ್ಯೇತು ದ್ವಿಭುಜಂ ಸಿತಾಂಗರುಚಿರಂ
ಸರ್ವಾರ್ಥದಂ ಸರ್ವದಾ ॥

ಎಂದರೆ, ಕೃತಯುಗದಲ್ಲಿ ಗಣೇಶನ ವಾಹನ ಸಿಂಹ, ಕೈಗಳು ಹತ್ತು, ತ್ರೇತಾಯುಗದಲ್ಲಿ ವಾಹನ ನವಿಲು, ಕೈಗಳು ಆರು, ದ್ವಾಪರದಲ್ಲಿ ಆನೆಯ ಮುಖ, ನಾಲ್ಕು ಕೈಗಳು; ಕಡೆಯದಾದ ಕಲಿಯುಗದಲ್ಲಿ ಎರಡೇ ಕೈಗಳು, ಬಿಳಿಯ ಮೈಬಣ್ಣ. ಕೃತ ಮತ್ತು ತ್ರೇತಾಯುಗಗಳಲ್ಲಿ ಅವನು ವಿನಾಯಕನೆನಿಸಿ ಕೊಳ್ಳುತ್ತಾನೆ; ದ್ವಾಪರ ಮತ್ತು ಕಲಿಯುಗಗಳಲ್ಲಿ ಅವನು ಗಜಾನನ.

ಸ್ಮೃತಿಯುಗದ 281 ವಿನಾಯಕರ ಸ್ವರೂಪವು ನಮಗೆ ತಿಳಿಯದು. ಪಂಡಿತ ಸಂಪೂರ್ಣಾನಂದರು ದೊರಕಿಸಿಕೊಟ್ಟಿರುವ ನಾಲ್ವರು ವಿನಾಯಕರ ರೂಪ ವಿಕಟವಾಗಿದೆ. ಪ್ರಾಚೀನ ಶಿಲ್ಪಗಳಲ್ಲಿಯೂ ಇದೇ ಮಾದರಿಯ ಮೈ ಮೂಡಿಬಂದಿದೆ. ಅಂಬಿಕಾಪುತ್ರ-ವಿನಾಯಕನು ಜನಪ್ರಿಯನಾಗಿ

ವಿಸ್ತೃತವಾದ ಆರಾಧನೆಗೆ ಸಂದಂದು ಗಣಪತಿಯ ಮೂರ್ತಿಕಲ್ಪನೆಯಲ್ಲಿ ಹತ್ತಾರು ವಿವರಗಳು ಸ್ಪಷ್ಟವಾದುವು; ಬಗೆ ಬಗೆಯ ಸ್ವರೂಪಗಳು ಮೈ ತಳೆದುವು. ಇಂದಿಗೂ ಲಕ್ಷ್ಮೀಗಣಪತಿ, ಭುವನೇಶಗಣಪತಿ, ಹೇರಂಬಗಣಪತಿ, ಪಿಂಗಳಗಣಪತಿ, ಊರ್ಧ್ವಗಣಪತಿ, ಮಹಾಗಣಪತಿ, ಹರಿದ್ರಾಗಣಪತಿ, ಅರ್ಭಕಗಣಪತಿ, ಉಚ್ಛಿಷ್ಟಗಣಪತಿ, ಸೂರ್ಯಗಣಪತಿ, ಶಕ್ತಿಗಣಪತಿ, ನೃತ್ತಗಣಪತಿ, ಸ್ವಯಂಭುಗಣಪತಿ, ವರದಗಣಪತಿ, ವಾತಾಪಿಗಣಪತಿ, ತುಷ್ಟಗಣಪತಿ, ಪ್ರಸನ್ನಗಣಪತಿ, ಅಷ್ಟಮಹಿಷೀಗಣಪತಿ ಮುಂತಾದ ಭೇದಗಳನ್ನು ಶಿಲ್ಪದಲ್ಲಿಯೂ ಧ್ಯಾನಕ್ರಮದಲ್ಲಿಯೂ ಕಾಣಬಹುದು.

ಎರಡು, ನಾಲ್ಕು, ಆರು, ಎಂಟು, ಹತ್ತು ಕೈಗಳಿರುವ ಗಣಪತಿಮೂರ್ತಿಗಳಿವೆ. ಬಿಳಿ, ಕೆಂಪು, ಹಳದಿಬಣ್ಣಗಳ ಗಣಪತಿಗಳು ಶಾಸ್ತ್ರಗಳಲ್ಲಿ ನಿರೂಪಿತವಾಗಿವೆ. ಕೈಗಳಲ್ಲಿ ಪಾಶ, ಅಂಕುಶ, ಅಕ್ಷಮಾಲೆ, ಖಡ್ಗ, ವಜ್ರಾಯುಧ, ಮೋದಕ, ದಂಡ, ಬೀಜಪೂರ (ದಾಳಿಂಬೆಹಣ್ಣು), ಪುಸ್ತಕ, ಕಳಶ (ಅಥವಾ ಮದ್ಯಪಾತ್ರೆ), ಸರ್ಪ, ಪರಶು, ಜಂಬೂಫಲ (ಲಿಂಗ), ಅಪೂಪಪಾತ್ರೆಗಳನ್ನು ಹಿಡಿದಿರುವಂತೆ ವಿವಿಧವಾಗಿ ಗಣಪತಿಯನ್ನು ಚಿತ್ರಿಸುತ್ತಾರೆ.

ಮಹಾರಾಜಲೀಲೆಯಲ್ಲಿ ಅವನು ಸುಖಾಸೀನನಾಗಿ ಕುಳಿತಂತೆಯೋ ಪದ್ಮಾಸನಸ್ಥನಾದಂತೆಯೋ ನಿಂತಂತೆಯೋ ಕುಣಿಯುವಂತೆಯೋ ಚಿತ್ರಿಸುತ್ತಾರೆ. ನಿಂತಿರುವ ಗಣಪತಿಮೂರ್ತಿಗಳು ಪ್ರಾಚೀನವೆನ್ನುತ್ತಾರೆ. ನಿಂತಾಗ ಸಮಭಂಗ, ದ್ವಿಭಂಗ, ತ್ರಿಭಂಗಗಳು ಕಾಣುತ್ತವೆ. ನೃತ್ಯಗಣಪತಿಗಳೂ ಹಲವಾರು ಬಗೆಗಳಲ್ಲಿ ಮೂಡಿಬಂದಿವೆ. ಬಾಲಕೃಷ್ಣನಂತೆ ಅಂಬೆಗಾಲಿಟ್ಟು ನಡೆಯುವ ಬಾಲಗಣಪತಿಮೂರ್ತಿಗಳಿವೆ.

# ಉಪಸಂಹಾರ

ಗಣಪತಿಯು ಅನಾರ್ಯಸಂಪ್ರದಾಯಕ್ಕೆ ಸೇರಿದ ಗ್ರಾಮ ದೇವತೆಯಾಗಿದ್ದು ಕಾಲಕ್ರಮದಲ್ಲಿ ಆರ್ಯದೇವತೆಗಳ ಸಂಸ್ಕಾರವನ್ನು ಪಡೆದನೆನ್ನುವುದು ನಿರ್ವಿವಾದ. ಆದರೆ ಗಣಪತಿಯ ಕಲ್ಪನೆಯು ಬೆಳೆದು ಬಂದ ದಾರಿ ಸ್ಪಷ್ಟವಾಗುವುದಿಲ್ಲ. ತಮಿಳಿನಲ್ಲಿ ಗಣೇಶನಿಗೆ 'ಪಿಳ್ಳೆಯಾರ್' ಎಂಬ ಹೆಸರು ಬಳಕೆಯಲ್ಲಿದೆ. 'ಮಗು' ಎಂಬ ಶಬ್ದದ ಗೌರವಪ್ರಯೋಗವಿದು. ಶಿವನ ಮಗು ಎಂದು ಈಗಿನವರು ಕೊಡುವ ಅರ್ಥ. ಆದರೆ ಮೊದಲಿಗೆ 'ಪಿಳ್ಳೆ' ಎಂಬ ಮಾತಿಗೆ 'ಆನೆಯ ಮರಿ' ಎನ್ನುವ ಅರ್ಥವಿದ್ದಿತು. ಆನೆಯ ಮರಿಯನ್ನೇ ದೇವತೆಯೆಂದು ಬಗೆದು ಪೂಜಿಸುತ್ತಿದ್ದ ಕಾಲವೊಂದು ಇದ್ದಿತೇ?

ಪ್ರಾಣಿಗಳನ್ನು ಪೂಜೆಮಾಡುವ ಪದ್ಧತಿಯೇನು ನಮಗೆ ಹೊಸದಲ್ಲ. ಆದರೂ ಬರಿಯ ಆನೆಯ ಮರಿಯು ದೇವತೆಯಾಗಿ ಜನಪ್ರಿಯವಾಯಿತೆಂದು ಹೇಳುವುದು ಹೆಚ್ಚಿನ ಮಾತು. ಆನೆಗಳೊಂದಿಗೇ ತಮ್ಮ ಬಾಳನ್ನು ಕಳೆಯುವ ಸೋಲಿಗರಿಗೂ ಗಣೇಶನಿಗೂ ಯಾವ ಸಂಬಂಧವೂ ಇಲ್ಲದಿರುವುದು ಗಮನಾರ್ಹ. ಅಥರ್ವವೇದದಲ್ಲಿ ಅಗ್ನಿ-ಬೃಹಸ್ಪತಿಗೆ ಆನೆಯ ಕಳೆಯನ್ನು ('ಹಸ್ತೀವರ್ಚಸ್') ಸೇರಿಸಿದ್ದಾರೆ; ಸ್ಮಾರ್ತಸಂಪ್ರದಾಯದ ವಿನಾಯಕರಲ್ಲಿ ಗಜಶೀರ್ಷದ ಗಾಂಗೇಯ-ವಿನಾಯಕರಿದ್ದರು. ಎಂದರೆ, ಆನೆಯ ಮುಖವು ಭೂತವಿಶೇಷವೊಂದರ ಲಕ್ಷಣವಾಗಿದ್ದಿತು. ಗಣಪತಿಯ ಗಜಮುಖವು ಈ ಹಿನ್ನೆಲೆಯಿಂದ ಬಂದಿರಬಹುದು.

ಗಣಪತಿಗೂ ಆನೆಗೂ ತುಂಬ ಪ್ರಾಚೀನವಾದ ಸಂಬಂಧವಿದೆ. ಹಿಂದಿನ ಕವಿಗಳಿಗೂ ಗಣಪತಿಯೆಂದರೆ ಆನೆಯ ಚಿತ್ರವೇ ಕಣ್ಣಿನ ಮುಂದೆ ಹಾಯುತ್ತಿದ್ದಿತು. ದಂಡಿಯು 'ದಶಕುಮಾರಚರಿತೆ'ಯಲ್ಲಿ "ಹಸ್ತಿವಕ್ತ್ರ-

ಭಗವಾನ"ನನ್ನು ಪ್ರಸ್ತಾಪಿಸಿದ್ದಾನೆ. ಭವಭೂತಿಯು ತನ್ನ 'ಮಹಾವೀರ ಚರಿತೆ'ಯಲ್ಲಿ "ಹೇರಂಬದಂತಮುಸಲೋಲ್ಲಿಖಿತೈಕಭಿತ್ತಿ"ಯನ್ನು ಬಣ್ಣಿಸಿದ್ದಾನೆ. ಬಾಣಭಟ್ಟನು ತನ್ನ 'ಕಾದಂಬರಿ'ಯಲ್ಲಿ "ಅವಗಾಹಾ ವತೀರ್ಣಗಣಪತಿ ಗಂಡಸ್ಥಲಗಲಿತಮದಪ್ರಸ್ರವಣಸಿಕ್ತಂ" ಎಂದು ಮುಂತಾಗಿ ಬರೆದಿದ್ದಾನೆ. ಏಳನೆಯ ಶತಮಾನದಲ್ಲಿ ಸಿದ್ಧವಾದ ಭಾಸ್ಕರವರ್ಮನ ನಿಧನಪುರಶಾಸನದಲ್ಲಿ ಕೂಡ "ಗಣಪತಿಮಿಮ ದಾನವರ್ಷಣಮಜಸ್ರಂ" ಎಂಬ ಮಾತನ್ನು ಕಾಣಬಹುದು.

ಅನಾರ್ಯದೇವತೆಯಾದರೂ ಹೀಗೆ ಆರ್ಯಪುರಸ್ಕೃತನಾಗಿ ಸರ್ವಸಾಮಾನ್ಯನಾಗಿ ನಿಂತಿರುವುದು ಬಿಡಿಸಲಾಗದ ಒಗಟು. ಸ್ವಭಾವದ ಸಂಕೇತವು ಸತ್ತ್ವಶಾಲಿಯಾದುದರಿಂದಲೇ ಗಣೇಶನು ಚಿರಂಜೀವಿಯಾಗಿದ್ದಾನೆ ಎನ್ನಬಹುದು.



1. ತ್ರಿಪುರಾರಿ ವರದಗಣಪತಿ, ರಂಜನ್‌ಗಾಂವ್

2. ಮಧುಕೈಟಭ-ವರದಗಣಪತಿ, ಸಿದ್ಧಟೇಕ್

3. ಮಯೂರೇಶ್ವರ-ಗಣಪತಿ, ಮೋರ್‌ಗಾಂವ್

4. ಡುಂಢೀಗಣಪತಿ, ಕಾಶಿ

5. ದ್ವಿಭುಜ-ಗಣಪತಿ, ಗೋಕರ್ಣ



6. ದ್ವಿಭುಜ-ಗಣಪತಿ, ಇಡುಗಂಜಿ, ಕಾರವಾರ



7. ಪ್ರಾಚೀನ ಗಣಪತಿ, ಘಾತೇಗರ್ಹ್

8. ಖ್ಮೇರ್‌ಯುಗಕ್ಕೆ ಮುಂಚಿನ ಗಣಪತಿ, ತುರೋಲ್-ಫ್ಲಾಕ್-ಕಿನ್, ಕಂದಲ್, ಕಂಬೋಡಿಯ (ಎಂಟನೆಯ ಶತಮಾನ)



9. ಸುಖಾಸೀನ-ಗಣಪತಿ, ಬೆಕ್ಕವೋಲು



10. ಅರ್ಭಕ-ಗಣಪತಿ, ಪಿಳ್ಳೆಯಾರ್‌ಪಟ್ಟಿ

11. ಬ್ರಿಟಿಷ್ ಮ್ಯೂಸಿಯಂನಲ್ಲಿರುವ ಪ್ರಾಚೀನ ಗಣಪತಿ



12. ಸಿಂಹಳದಲ್ಲಿ ದೊರೆತಿರುವ ಪ್ರಾಚೀನ ಗಣಪತಿ

13: ನೇಪಾಳದ ಗಣಪ

14. ಬಾಲಗಣಪತಿ, ಬಹುಶಃ ಚೀಣೀಶಿಲ್ಪ

15. ಬೋರ್ನಿಯೋದ ಕೊಂಬೆಂಗ್ ಗುಹೆಯಲ್ಲಿ ದೊರೆತ
ಗಣಪತಿಮೂರ್ತಿ (ಐದನೆಯ ಶತಮಾನ)



16. ಬುದ್ಧ-ಗಣಪತಿ, ಬರ್ಮಾ
(ವಜ್ರಾಸನ, ಭೂಮಿಸ್ಪರ್ಶಮುದ್ರೆ, ಶಂಖಾಂಕುಶಹಸ್ತ)

17. ಪ್ರಾಚೀನ ಆಲಬಾಸ್ಟರ್ ಗಣಪತಿ

18. ಚೀಣೀತುರ್ಕಿಸ್ತಾನದ ವರ್ಣಚಿತ್ರ, ಎಂಡೆರೆ
(ಎಂಟನೆಯ ಶತಮಾನ)

19. ಬಾರಾಗಣೇಶ, ದ್ಜೆಂಬೆ (ಜಾವಾ), ಇದರಲ್ಲಿ 1239ರ ಶಾಸನವಿದೆ.

20. ವ್ಯಾಘ್ರಪಾದ-ಗಣೇಶಾನಿ (ಮಧುರಾಜದೇವಾಲಯ)

21. ಸುಖಾಸೀನ-ಗಣೇಶಾನಿ

22. ಮಧುವೂರು-ಗಣಪತಿ, ಕಾಸರಗೋಡು

23. ದ್ವಿಭುಜ-ಗಣಪತಿ, ಕಂಬೋಡಿಯ

24. ಚೀಣೀ ಗಣೇಶ, ಕುಂಗ್-ಹ್ಸಿ-ಎನ್ ಬೌದ್ಧವಿಹಾರ (ಕ್ರಿಸ್ತಾಬ್ದ 531).
ಇದರಲ್ಲಿ "ಗಜರಾಜಯಕ್ಷ" ಎಂಬ ಹೆಸರು ಚೀಣಲಿಪಿಯಲ್ಲಿದೆ.
ಎಡಗೈಯಲ್ಲಿರುವುದು ಚಿಂತಾಮಣಿ.



25. ಜಾವಾಗಣೇಶ, ಟ್ಜಂಡಿ ಸಿಂಗಸಾರಿ. ಕಪಾಲಸಿಂಹಾಸನದ ಮೇಲೆ ಮಹಾರಾಜಲೀಲೆಯಲ್ಲಿ ಕುಳಿತ ಗಣೇಶನು ಭೈರವರೂಪಿ.

26. ಷಡ್ಬಾಹು-ಗಣಪತಿ, ನೇಪಾಳ

27. ಗಣಪತಿ, ದಕ್ಷಿಣ-ಭಾರತ (ಹತ್ತು-ಹನ್ನೆರಡನೆಯ ಶತಮಾನ)

28. ಶಕ್ತಿಗಣಪತಿ, ಬುಂದೇಲಖಂಡ (ಆರನೆಯ ಶತಮಾನ)



29. ಶಕ್ತಿಗಣಪತಿ, ದಕ್ಷಿಣ-ಭಾರತ (ಲಕ್ಷ್ಮೀಗಣಪತಿ)

30. ಉಚ್ಛಿಷ್ಟ-ಗಣಪತಿ, ಧಾರಾಸುರಂ ದೇವಾಲಯ,
ತಂಜಾವೂರು ಜಿಲ್ಲೆ

31. ವಾತಾಪಿ-ಗಣಪತಿ, ತಿರುವಾರೂರು

32. ಹೇರಂಬ-ಗಣಪತಿ, ನಾಗಪಟ್ಟಣ

33. ಆಖುರಥ-ಗಣಪತಿ, ಪಾನುಗಲ್ಲು

34. ನೃತ್ತಗಣಪತಿ, ವೇದಾರಣ್

35. ಬಾಲಗಣಪತಿ

36. ಮಹಾವಿಘ್ನೇಶ್ವರ-ಗಣಪತಿ, ಸಯಾಂ, ಪ್ರಾಚೀನ ರೇಖಾಚಿತ್ರ

37. ಗರ್ಭಧಾತು-ವಿನಾಯಕ, ಚೈನಾ

38. ಕಾಂಗಿಟೆನ್ ಗಣಪತಿ, ಜಪಾನ್

39. ಶಕ್ತಿಸಹಿತ-ಹೇರಂಬಗಣಪತಿ

## ‘ಭಾರತತೀರ್ಥ’

ಭಾರತೀಯತೆಯ ಸಾರಸ್ವತಯಜ್ಞದಲ್ಲಿ ನೀವೂ ಭಾಗಿಯಾಗ ಬಹುದು, ಹೀಗೆ—

- ❖ ಭಾರತತೀರ್ಥಗ್ರಂಥಮಾಲಿಕೆಯ ಕೃತಿಗಳನ್ನು ಕೊಂಡು ಓದುವುದು ಹಾಗೂ ಸ್ನೇಹಿತರನ್ನೂ, ಬಂಧು-ಬಳಗ ದವರನ್ನೂ ಓದಿಗೆ ಪ್ರೇರಿಸುವ ಮೂಲಕ,
- ❖ ಉಪನಯನ, ಮದುವೆ, ಹುಟ್ಟುಹಬ್ಬ ಮುಂತಾದ ಶುಭಸಮಾರಂಭಗಳಲ್ಲಿ ‘ಭಾರತತೀರ್ಥ’ಕೃತಿಗಳನ್ನು ಉಡುಗೊರೆಯಾಗಿ ನೀಡುವ ಮೂಲಕ,
- ❖ ಈ ಯೋಜನೆಗೆ ಸರಿಹೊಂದುವಂಥ ವಿಷಯಗಳನ್ನೂ, ಲೇಖಕರನ್ನೂ ಸೂಚಿಸುವ ಮೂಲಕ,
- ❖ ಪುಸ್ತಕಗಳ ಪ್ರಕಟನೆಗೆ ಉದಾರವಾಗಿ ಧನಸಹಾಯವನ್ನು ಒದಗಿಸುವ ಮೂಲಕ,

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ

—ಎಸ್. ಸೂರ್ಯಪ್ರಕಾಶ ಪಂಡಿತ್
ಸಂಪಾದಕ
panditsurya@yahoo.co.in
✆ 94484 94949

# ಅಭಿಜ್ಞಾನ

ಬೆಂಗಳೂರು - 560 019 © 2242 1414, 9448 49 49 49
abhijnanam@yahoo.com; abhijnanabooks@yahoo.com

ಸಂಸ್ಕೃತಿ-ಕಲೆ-ಸಾಹಿತ್ಯ—ಈ ಕ್ಷೇತ್ರಗಳಲ್ಲಿ ತನ್ನನ್ನು ಗುರುತಿಸಿಕೊಂಡ ಅಭಿಜ್ಞಾನ ಶ್ರೀಯುತ ಡಿ.ವಿ.ಜಿ. ಮತ್ತು ಡಾ. ಆನಂದ ಕೆ. ಕುಮಾರಸ್ವಾಮಿ ಅವರ ಜೀವನ-ದರ್ಶನಗಳ ಬೆಳಕಿನಲ್ಲಿ 1996ರಲ್ಲಿ ಅಸ್ತಿತ್ವಕ್ಕೆ ಬಂದಿತು. ಭಾರತೀಯಪರಂಪರೆಯನ್ನು ಪ್ರತಿಬಿಂಬಿಸುವಂಥ ಚಟುವಟಿಕೆಗಳ ಕಡೆಗೆ ನಮ್ಮ ಮುಖ್ಯ ಲಕ್ಷ್ಯ; ಆದರೆ ಜಗತ್ತಿನ ಪ್ರತಿಯೊಂದು ಸಾತ್ತ್ವಿಕಸ್ವರೂಪವೂ ನಮಗೆ ಪೂಜ್ಯ. ಪೌರಸ್ತ್ಯ-ಪಾಶ್ಚಾತ್ಯ ಪ್ರಪಂಚದ ಶುದ್ಧ-ಶುಭ್ರ ಪ್ರಜ್ಞಾಪ್ರವಾಹದ ಸಂಗಮಸ್ಥಾನ ಅಭಿಜ್ಞಾನ.

## ಅಭಿಜ್ಞಾನದೊಂದಿಗೆ ನೀವು ಹೇಗೆ ಗುರುತಿಸಿಕೊಳ್ಳಬಹುದು?

- ಅಭಿಜ್ಞಾನದ ಪ್ರಕಟನೆಗಳನ್ನು ಕೊಂಡು ಓದುವುದರ ಮೂಲಕ,
- ಅಭಿಜ್ಞಾನ ಏರ್ಪಡಿಸುವ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಬಂಧು-ಮಿತ್ರರೊಡಗೂಡಿ ಭಾಗವಹಿಸುವ ಮೂಲಕ,
- ಅಭಿಜ್ಞಾನದ ಚಟುವಟಿಕೆಗಳಿಗೆ ಹಾಗೂ ಗ್ರಂಥಯೋಜನೆಗಳಿಗೆ ಉದಾರವಾಗಿ ತನು-ಮನ-ಧನಸಹಾಯವನ್ನು ಒದಗಿಸುವ ಮೂಲಕ.

ಆತ್ಮೀಯರೇ, ಅಭಿಜ್ಞಾನದ ಕಾರ್ಯಕ್ರಮಗಳಲ್ಲಿ ಭಾಗವಹಿಸಿ, ಪ್ರೋತ್ಸಾಹಿಸಿ, ಬೆಂಬಲಿಸಿ, ಬೆಳಸಿ.

ಎಸ್. ಸೂರ್ಯಪ್ರಕಾಶ ಪಂಡಿತ್
*ಸಂಪಾದಕ*
E-mail: panditsurya@yahoo.co.in

---

## ಅಭಿಜ್ಞಾನದ ಮುಂದಿನ ಕೆಲವು ಪ್ರಕಟನೆಗಳು

*ಪೂರ್ಣಪ್ರಜ್ಞಪ್ರಶಸ್ತಿ* / ಪ್ರೊ. ಸಾ. ಕೃ. ರಾಮಚಂದ್ರರಾವ್ • *ಬುದ್ಧನ ಬಾಳು-ಬೆಳಕು* / ಪ್ರೊ. ಸಾ. ಕೃ. ರಾಮಚಂದ್ರರಾವ್ • *ಶ್ರೀಕೃಷ್ಣನ ವ್ಯಕ್ತಿತ್ವ*/ ಪ್ರೊ. ಸಾ. ಕೃ. ರಾಮಚಂದ್ರರಾವ್ • *ಮೇಘದೂತ ಒಂದು ಹಳೆಯ ಕಥೆ*/ ಹಜಾರಿಪ್ರಸಾದ್ ದ್ವಿವೇದಿ / ಮ. ಸು. ಕೃಷ್ಣಮೂರ್ತಿ • *ಧರ್ಮಚಕ್ರ* / ಪ್ರೊ. ಜಿ. ಎನ್. ಚಕ್ರವರ್ತಿ • *ತರ್ಕಸಂಗ್ರಹ* / ಮಹೇಶ ಅಡಕೋಳಿ, ಶಂಕರಭಟ್ಟ • *ಪ್ರಜ್ಞಾರಂಗ*/ ವಿದ್ವಾನ್ ಎನ್. ರಂಗನಾಥಶರ್ಮ ಅವರ ಸಮಗ್ರ ಲೇಖನಗಳು • *ಸಾಮಾನ್ಯಪ್ರಜ್ಞೆಯೇ ಬುದ್ಧಪ್ರಜ್ಞೆ* / ಎಸ್. ಸೂರ್ಯಪ್ರಕಾಶ ಪಂಡಿತ್ • *ಜೀವನ ಮತ್ತು ಕಲೆ* / ಎಸ್. ಸೂರ್ಯಪ್ರಕಾಶ ಪಂಡಿತ್

## ಮುಂದಿನ ಕೆಲವು ಗ್ರಂಥಯೋಜನೆಗಳು

ಪುರುಷಾರ್ಥಗಳು • ಭಾರತದಲ್ಲಿ ವ್ರತ, ಪರ್ವ, ಉತ್ಸವಗಳು - ಒಂದು ಸಾಂಸ್ಕೃತಿಕ ಅವಲೋಕನ • ಅಲಂಕಾರಶಾಸ್ತ್ರ • ಝೆನ್‌ದರ್ಶನ

## ಅಭಿಜ್ಞಾನದ ಕೆಲವು ಪ್ರಕಟನೆಗಳು

- *ಶ್ರೀಸೂಕ್ತ* / ಪ್ರೊ. ಸಾ. ಕೃ. ರಾಮಚಂದ್ರರಾವ್ (ಅಚ್ಚಿನಲ್ಲಿದೆ)
- *ಕಲಾತತ್ತ್ವಮಹರ್ಷಿ ಆನಂದ ಕುಮಾರಸ್ವಾಮಿ* / ಪ್ರೊ. ಸಾ. ಕೃ. ರಾಮಚಂದ್ರರಾವ್ (ಜೀವನಚರಿತ್ರೆ) ರೂ. 25
- *ಪ್ರಥಮ ಸೋಪಾನ* / ಸ್ವಾಮೀ ಪರಮಾನಂದ ಭಾರತೀ ರೂ. 45 (ದೇವರು-ಪುನರ್ಜನ್ಮ-ವೇದಗಳನ್ನು ಕುರಿತ ಮೀಮಾಂಸೆ)
- *ವಿಲಿಯಂ ಷೇಕ್ಸ್‌ಪಿಯರ್* / ಪ್ರೊ. ಎಲ್. ಎಸ್. ಶೇಷಗಿರಿ ರಾವ್ ರೂ. 110
- *ಮೆಲುಗಾಳಿಯ ಮಾತುಗಳು* / ಡಾ. ಟಿ. ವಿ. ವೆಂಕಟಾಚಲ ಶಾಸ್ತ್ರೀ ರೂ. 90 (ತೊಂಬತ್ತು ಚಿಂತನಗಳ ಸಂಗ್ರಹ)
- *ಅಣ್ಣಪ್ಪದೈವ* / ಪ್ರೊ. ಸಾ. ಕೃ. ರಾಮಚಂದ್ರರಾವ್ ರೂ. 65
- *ಶಾರದಾಪೀಠದ ಮಾಣಿಕ್ಯ* / ಪ್ರೊ. ಸಾ. ಕೃ. ರಾಮಚಂದ್ರರಾವ್ ರೂ. 90
- *Śaṅkara and Adhyāsa-bhāṣya*/ Prof. S. K. Ramachandra Rao Rs. 100
- *ಅಭಿನವಗುಪ್ತ* / ಪ್ರೊ. ಸಾ. ಕೃ. ರಾಮಚಂದ್ರರಾವ್ ರೂ. 50 (ಯೋಗಿ, ಸಿದ್ಧ, ದಾರ್ಶನಿಕ, ಆಲಂಕಾರಿಕನ ಜೀವನ-ದರ್ಶನ)
- *ಕಾಮ ಒಂದು ಪುರುಷಾರ್ಥ* / ಡಾ. ವಿ. ಕೆ. ಹಂಪಿಹೊಳಿ ರೂ. 75
- *ಧಾರ್ಮಿಕ ಸಂಸ್ಕಾರಗಳಲ್ಲಿ ಸಂಗೀತ* / ಡಾ. ರಾ. ಸತ್ಯನಾರಾಯಣ ರೂ. 145
- *ಚಿಂತನ ಚಿಲುಮೆ* / ಸತ್ಯೇಶ್ ಎನ್. ಬೆಳ್ಳೂರ್ ರೂ. 70
- *ಹೃದಯಸಂಪನ್ನತೆ* / ಪ್ರೊ. ಶ್ರೀಕಂಠಕುಮಾರಸ್ವಾಮಿ ರೂ. 60
- *Śṛṅgeri* / Prof. A. V. Narasimhamurthy Rs. 140 (The Holy Abode of the Shankaracharyas of the South)
- *ತಿರುಪತಿ ತಿಮ್ಮಪ್ಪ* / ಪ್ರೊ. ಸಾ. ಕೃ. ರಾಮಚಂದ್ರರಾವ್ ರೂ. 450
- *ಚಂಪೂರಾಮಾಯಣಮ್ ಕಿಷ್ಕಿಂಧಾಕಾಂಡಮ್* / ಡಾ. ಮಹೇಶ ಅಡಕೋಳಿ (ಮೂಲ, ಅನ್ವಯ, ಕನ್ನಡ ಅನುವಾದ, ಟಿಪ್ಪಣಿಗಳು) ರೂ. 45
- *ಸೂಕ್ತಿಕೋಶ* / ಪ್ರೊ. ಕೆ. ಎಸ್. ಕಣ್ಣನ್ ರೂ. 120
- *ಚಂಪೂರಾಮಾಯಣಮ್ ಬಾಲಕಾಂಡಮ್* / ಡಾ. ಮಹೇಶ ಅಡಕೋಳಿ (ಮೂಲ, ಅನ್ವಯ, ಕನ್ನಡ ಅನುವಾದ, ಟಿಪ್ಪಣಿಗಳು) ರೂ. 75
- *ಶ್ರೀದತ್ತಭಾವಸುಧಾರಸಸ್ತೋತ್ರಮ್* / ಶೇಷಾಚಲಶರ್ಮಾ ರೂ. 25
- *ಗಣಪತಿಯ ಕಲ್ಪನೆ* / ಪ್ರೊ. ಸಾ. ಕೃ. ರಾಮಚಂದ್ರರಾವ್ ರೂ. 60
- *ವಾಲ್ಮೀಕಿಪ್ರತಿಭೆ* / ಪ್ರೊ. ಸಾ. ಕೃ. ರಾಮಚಂದ್ರರಾವ್ ರೂ. 45
- *ಶ್ರೀಕೃಷ್ಣನ ವ್ಯಕ್ತಿತ್ವ* / ಪ್ರೊ. ಸಾ. ಕೃ. ರಾಮಚಂದ್ರರಾವ್ ರೂ. 60
- *ಗೀತಗೋವಿಂದ* / ಪ್ರೊ. ಸಾ. ಕೃ. ರಾಮಚಂದ್ರರಾವ್ ರೂ. 45

ಭಾರತದೇಶದ ಋಷಿ-ಮುನಿಗಳು, ಸಿದ್ಧರು-ಸಂತರು-ಮಹಾಪುರುಷರು, ತೀರ್ಥಕ್ಷೇತ್ರಗಳು, ಕಲಾಪ್ರಕಾರಗಳು, ಸಾಹಿತ್ಯ, ದರ್ಶನಪ್ರಸ್ಥಾನಗಳು, ಕಲ್ಪನೆಗಳು, ಇತಿಹಾಸ, ವಿಜ್ಞಾನ, ಜೀವನಪದ್ಧತಿಗಳು—ಹೀಗೆ ಸಮಸ್ತ ಭಾರತೀಯವಿದ್ಯೆಗಳನ್ನು ಕುರಿತು ಪ್ರಕಟವಾಗುವ ಗ್ರಂಥಮಾಲಿಕೆಯೇ 'ಭಾರತತೀರ್ಥ'.

ಭಾರತೀಯಸಂಸ್ಕೃತಿಯಲ್ಲಿ ಸ್ವಾರಸ್ಯವಾಗಿ ತೋರಿಕೊಂಡಿರುವ ಗಣಪತಿತತ್ತ್ವದ ಹಿನ್ನೆಲೆಯನ್ನೂ, ಸಾಂಕೇತಿಕತೆಯನ್ನೂ, ಅನನ್ಯತೆಯನ್ನೂ ಈ ಕೃತಿಯಲ್ಲಿ ಕಾಣಿಸಲಾಗಿದೆ.

ವಿದ್ಯಾಲಂಕಾರ ಪ್ರೊ. ಸಾ. ಕೃ. ರಾಮಚಂದ್ರರಾವ್ ನಮ್ಮ ನಾಡು ಕಂಡಿರುವ ಶ್ರೇಷ್ಠವಿದ್ವಾಂಸರಲ್ಲಿ ಒಬ್ಬರು; ವೇದ-ವೇದಾಂತ-ಬೌದ್ಧ-ಜೈನ-ಆಗಮ-ತಂತ್ರ-ಶಿಲ್ಪ-ಚಿತ್ರ-ಆಯುರ್ವೇದ-ಯೋಗ—ಹೀಗೆ ಹತ್ತಾರು ವಿಷಯಗಳ ಬಗ್ಗೆ ಕನ್ನಡ-ಇಂಗ್ಲಿಷ್‌ಭಾಷೆಗಳಲ್ಲಿ ಇನ್ನೂರಕ್ಕೂ ಹೆಚ್ಚು ಮೌಲಿಕ ಗ್ರಂಥಗಳನ್ನು ರಚಿಸಿರುವವರು.

ಅಭಿಜ್ಞಾನ
ಬೆಂಗಳೂರು

ISBN: 978-81-88278-16-9
9 788188 278169

ರೂ. 60